ಸಂಪುಟ 01 | ಸಂಚಿಕೆ 193 | ಸೋಮವಾರ 29 ಜೂನ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು


# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com


## ಈ ದಿನದ ವಿಶೇಷ

**1) ರಾಷ್ಟ್ರೀಯ ಸಂಖ್ಯಾಶಾಸ್ತ್ರ ದಿನ**

ಭಾರತದ ಪ್ರಸಿದ್ಧ ಸಂಖ್ಯಾಶಾಸ್ತ್ರಜ್ಞ ಪ್ರೊ. ಪ್ರಶಾಂತ ಚಂದ್ರ ಮಹಾಲನೋಬಿಸ್ ಅವರ ಜನ್ಮದಿನದ ಸ್ಮರಣಾರ್ಥವಾಗಿ ಪ್ರತಿ ವರ್ಷ ಈ ದಿನವನ್ನು ಆಚ-ರಿಸಲಾಗುತ್ತದೆ.ಆರ್ಥಿಕ ಯೋಜನೆಗಳು ಮತ್ತು ನೀತಿ ನಿರೂಪಣೆಯಲ್ಲಿ ಸಂಖ್ಯಾಶಾಸ್ತ್ರದ ಪಾತ್ರದ ಬಗ್ಗೆ ಜನರಿಗೆ ಅರಿವು ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

**2) ಅಂತಾರಾಷ್ಟ್ರೀಯ ಉಷ್ಣವಲಯದ ದಿನ**

ಉಷ್ಣವಲಯದ ರಾಷ್ಟ್ರಗಳು ಎದುರಿಸುತ್ತಿರುವ ಸವಾಲುಗಳು, ಅವುಗಳ ಪ್ರಾಮುಖ್ಯತೆ ಹಾಗೂ ಸಂರಕ್ಷಣಾ ತಂತ್ರಗಳ ಬಗ್ಗೆ ಜಾಗತಿಕ ಜಾಗೃತಿ ಮೂಡಿಸಲು ವಿಶ್ವಸಂಸ್ಥೆಯು ಈ ದಿನವನ್ನು ಆಚ-ರಿಸುತ್ತದೆ.

## ಸುಭಾಷಿತ

ಕೋಪ ಎಂಬುದು ಆಯ್ಸಿಡ್ ಇದ್ದಂತೆ. ಅದು ಪ್ರವಹಿಸಿದ ಕಡೆಗಿಂತ ಹೆಚ್ಚಾಗಿ, ಅದನ್ನು ಸಂಗ್ರಹಿಸಿಟ್ಟ ಪಾತ್ರೆಗೇ ಹೆಚ್ಚು ಹಾನಿ

–ಮಾರ್ಕ್ ಟ್ವೈನ್

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9902277588 9880707587 9008787586

## ಎಸ್‌ಐಆರ್ ನಿಂದ ಕಾರ್ಮಿಕರ ಮತಗಳು ಕೈಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸಿ : ಮುಖ್ಯಮಂತ್ರಿ

◆ ನೈಜ್ಯ ದೆಸೆ ನ್ಯೂಸ್



ಬೆಂಗಳೂರು :- ಕರ್ನಾಟಕದಲ್ಲಿ ಜೂ.30ರಿಂದ ಎಸ್ಐಆರ್ ಪ್ರಾರಂಭ ಆಗುತ್ತಿದೆ. ಬಿಜೆಪಿ ಮತಗಳನ್ನು ತೆಗೆಸುತ್ತಿದೆ. ಈ ದೇಶದ ಶ್ರಮಿಕರ, ಕಾರ್ಮಿಕರ ಮತಗಳನ್ನು ಕೈ ಬಿಡಲಾಗುತ್ತಿದೆ. ಕಾರ್ಮಿಕರಿಂದ ಹಿಡಿದು ಎಲ್ಲರೂ ಇದರ ಬಗ್ಗೆ ಎಚ್ಚರದಿಂದ ಇರಬೇಕು. ಮತಗಳು ಕೈ ಬಿಟ್ಟು ಹೋಗದಂತೆ ಎಚ್ಚರವಹಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ರವಿವಾರ ನಗರದ ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಸಭಾಂಗಣದಲ್ಲಿ ನಡೆದ ಎಐಟಿಯುಸಿ (ಇಂಟೆಕ್) 316ನೆ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.ಇಂಟೆಕ್ ಮೂಲಕ ದೇಶದ ಶ್ರಮಿಕರ, ಕಾರ್ಮಿಕರ ಬಲ ಹೆಚ್ಚಾಗಿದೆ. ಯಾವುದೇ ರಾಜಕೀಯ ತೀರ್ಮಾನ ತೆಗೆದುಕೊಂಡರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಇಂಟೆಕ್ ಸದಸ್ಯರು ಮುಖ್ಯವಾಗುತ್ತಾರೆ. ಇಂದಿರಾಗಾಂಧಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಇಂಟೆಕ್, ಎನ್ಎಸ್ಯುಐ, ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್ ಅನ್ನು ಕಾಂಗ್ರೆಸ್ ಪಕ್ಷದ ನಾಲ್ಕು ಆಧಾರ ಸ್ಥಂಭಗಳು ಎಂದು ಹೇಳಿದ್ದರು. ನಾನು ವಿದ್ಯಾರ್ಥಿ ನಾಯಕನಾಗಿ ನಂತರ ಮುಖ್ಯವಾಹಿನಿ ರಾಜಕೀಯಕ್ಕೆ ಬಂದವನು. ನನಗೆ ಸಂಘಟನೆಯ ಶಕ್ತಿಯ ಬಗ್ಗೆ ಅರಿವಿದೆ ಎಂದು ಅವರು ಹೇಳಿದರು.ಕಾರ್ಮಿಕರಿಲ್ಲದೇ ದೇಶದ ಆರ್ಥಿಕ ಪ್ರಗತಿ ಅಸಾಧ್ಯ: ಕೃಷಿಕ, ಶಿಕ್ಷಕ, ಸೈನಿಕ, ಕಾರ್ಮಿಕರು ಇಲ್ಲದೇ ಸಮಾಜ ಮುನ್ನಡೆಯದು. ಈ ದೇಶಕ್ಕೆ ಕಾರ್ಮಿಕರ ಶ್ರಮ, ಶಕ್ತಿ, ಬದ್ಧತೆ ಸಾಕಷ್ಟು ಕೊಡುಗೆಯನ್ನು ನೀಡಿದೆ. ಕಾರ್ಮಿಕ ಇಲ್ಲದೇ ಹೋದರೆ ಯಾವುದೇ ದೇಶದ ಆರ್ಥಿಕತೆ ಬೆಳೆಯುವುದಿಲ್ಲ. ಉದ್ದಿಮೆದಾರರು ಪ್ರಬಲರಾದರೆ ಕಾರ್ಮಿಕರೂ ಬಲವಾಗುತ್ತಾರೆ. ಜೊತೆಗೂಡಿದರೆ ಆರಂಭ, ನಂತರ ಪ್ರಗತಿ ಎಂದು ಶಿವಕುಮಾರ್ ತಿಳಿಸಿದರು.ಸಂಜೀವ್ ರೆಡ್ಡಿ ಸಾಕಷ್ಟು ವರ್ಷದಿಂದ ಈ ಸಂಘಟನೆಯನ್ನು ಅಚ್ಚುಕಟ್ಟಾಗಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಆಸ್ಕರ್ ಫರ್ನಾಂಡೀಸ್ ಹಾಗೂ ಮಲ್ಲಿಕಾರ್ಜುನ ಖರ್ಗೆ ಕಾರ್ಮಿಕ ಸಚಿವರಾಗಿದ್ದಾಗ ಕ್ರಾಂತಿ-ಕಾರಿ ಬದಲಾವಣೆ ತಂದರು. ಕಾರ್ಮಿಕ ಚಳವಳಿಗೆ ಮಾನ್ಯತೆ ನೀಡಿದರು ಎಂದು ಮುಖ್ಯಮಂತ್ರಿ ಸ್ಮರಿಸಿದರು.ಕಾರ್ಮಿಕರಿಗಾಗಿ ಇಎಸ್ಐ ಆಸ್ಪತ್ರೆ ತಂದರು. ಕಾರ್ಮಿಕರ ಮಕ್ಕಳಿಗಾಗಿ ಇಎಸ್ಐ ಆಸ್ಪತ್ರೆಗಳಲ್ಲಿ ಉಚಿತ ಮೆಡಿಕಲ್ ಸೀಟುಗಳನ್ನು ನೀಡಲಾಯಿತು. 10–15 ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಲಾಯಿತು. ಇಬ್ಬರ ನೇತೃತ್ವದಲ್ಲಿ ಕಾರ್ಮಿಕರ ಜೀವನದಲ್ಲಿ ಬದಲಾವಣೆ ಪ್ರಾರಂಭವಾಯಿತು. ಮಲ್ಲಿಕಾರ್ಜುನ ಖರ್ಗೆ ಈಗ ಎಐಸಿಸಿ ಅಧ್ಯಕ್ಷರಾಗಿದ್ದಾರೆ ಎಂದು ಶಿವಕುಮಾರ್ ತಿಳಿಸಿದರು.ಕಾರ್ಮಿಕರ ಕಲ್ಯಾಣ-ಕ್ಕಾಗಿ ಗ್ಯಾರಂಟಿ ಯೋಜನೆಗಳು ಜಾರಿ: ನಾನು ಸರಕಾರದ ಪ್ರತಿನಿಧಿಯಾಗಿದ್ದೇನೆ. ನಾನು ಎಂದಿಗೂ ನಿಮ್ಮ ಪರವಾಗಿ, ಕಾರ್ಮಿಕರ ಪರವಾಗಿ ಇರುತ್ತೇನೆ. ನಾವು ತಂದಿರುವ ಐದು ಗ್ಯಾರಂಟಿ ಯೋಜನೆಗಳು ಕಾರ್ಮಿಕರ, ಮಹಿಳೆಯರ ಹಾಗೂ ಜನಸಾಮಾನ್ಯರ ಪರವಾಗಿವೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ಪ್ರಧಾನಿಯಿಂದ ಹಿಡಿದು ಎಲ್ಲರೂ ಟೀಕೆ ಮಾಡಿದರು ಎಂದು ಅವರು ಹೇಳಿದರು.ದೇಶದಲ್ಲಿ ಬೆಲೆಏರಿಕೆ ಆಗಿದ್ದ-ರಿಂದ ನಮ್ಮ ಗ್ಯಾರಂಟಿ ಯೋಜನೆಗಳು ಜನರ ಹಿತಕ್ಕಾಗಿ ಜಾರಿಗೆ ತರಲಾಯಿತು. 50 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಹಣ ಪ್ರತಿ ವರ್ಷ ಖರ್ಚು ಮಾಡಲಾಗುತ್ತಿದೆ. ಟೀಕೆ ಮಾಡಿದವರೇ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದರು.2028ಕ್ಕೆ ಕರ್ನಾಟಕದಲ್ಲಿ ಹಾಗೂ 2029ಕ್ಕೆ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತ. ಇದಕ್ಕೆ ದೇಶದ ಕಾರ್ಮಿಕರ, ಜನಸಾಮಾನ್ಯರ ಬೆಂಬಲ ಇರಬೇಕು. ನಾವೆಲ್ಲರೂ ಒಟ್ಟಾಗಿ ಸಾಗೋಣ, ಕೆಲಸ ಮಾಡೋಣ ಕಾಂಗ್ರೆಸ್ ಪಕ್ಷದ ಬಲವನ್ನು ಹೆಚ್ಚಿಸೋಣ.–ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

## ಪಲ್ಸ್ ಪೋಲಿಯೋ ಯಶಸ್ಸಿಗೆ ಸನ್ ರೈಸ್ ವಿದ್ಯಾರ್ಥಿಗಳ ಉತ್ಸಾಹಭರಿತ ಸಹಕಾರ

◆ ನೈಜ್ಯ ದೆಸೆ ನ್ಯೂಸ್



ಸಿಂಧನೂರು ಜೂನ್ 28 : ಪಲ್ಸ್ ಪೋಲಿಯೋ ಭಾನುವಾರದ ಅಂಗವಾಗಿ ಸಿಂಧನೂರು ನಗರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾದ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಸನ್ ರೈಸ್ ಡಿ-ಫಾರ್ಮಸಿ, ನರ್ಸಿಂಗ್, ಪಾರಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಮಹತ್ವದ ಸಹಕಾರ ನೀಡಿದರು. ನಗರ ಆರೋಗ್ಯ ಕೇಂದ್ರದಲ್ಲಿ ಮತ್ತು ನಗರದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ವಿವಿಧ ಅಂಗನವಾಡಿ ಕೇಂದ್ರಗಳು ಹಾಗೂ ಪೋಲಿಯೋ ಬೂತ್‌ಗಳಲ್ಲಿ ವಿದ್ಯಾರ್ಥಿಗಳು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ, ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸುವಂತೆ ಮನವಿ ಮಾಡಿದರು. ಆರೋಗ್ಯ ಇಲಾಖೆಯ ಸಿಬ್ಬಂದಿಯೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಿ ಲಸಿಕಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ನೆರವಾದರು.ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಕೆ. ಇರ್ಷಾದ್ ಅತ್ತಾರ್ ಹಾಗೂ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು ವಿವಿಧ ಪೋಲಿಯೋ ಬೂತ್‌ಗಳಿಗೆ ಭೇಟಿ ನೀಡಿ ಕಾರ್ಯಕ್ರಮದ ಪರಿಶೀಲನೆ ನಡೆಸಿ, ವಿದ್ಯಾರ್ಥಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಯ ಸೇವೆಯನ್ನು ಶ್ಲಾಘಿಸಿದರು. ವಿದ್ಯಾರ್ಥಿಗಳ ಸಮಾಜಮುಖಿ ಸೇವಾ ಮನೋಭಾವವನ್ನು ಅಭಿನಂದಿಸಿ, ಇಂತಹ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳಲ್ಲಿ ಸದಾ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಿದರು.ಆರೋಗ್ಯ ಇಲಾಖೆಯ ಅಧಿಕಾರಿಗಳು ಸಹ ಸನ್ ರೈಸ್ ಸಂಸ್ಥೆಯ ವಿದ್ಯಾರ್ಥಿಗಳ ಸೇವಾ ಮನೋಭಾವ ಮತ್ತು ಸಹಕಾರವನ್ನು ಪ್ರಶಂಸಿಸಿ ಕೃತಜ್ಞತೆ ಸಲ್ಲಿಸಿದರು. ಈ ಕಾರ್ಯಕ್ರಮವು ಸಾರ್ವಜನಿಕ ಆರೋಗ್ಯ ರಕ್ಷಣೆಯಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ಆರೋಗ್ಯ ಇಲಾಖೆಯ ನಡುವಿನ ಉತ್ತಮ ಸಹಭಾಗಿತ್ವಕ್ಕೆ ಸಾಕ್ಷಿಯಾಯಿತು.

## ಮುದ್ದೇಬಿಹಾಳದಲ್ಲಿ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ : ಮೊದಲ ದಿನವೇ 4,464 ಮಕ್ಕಳಿಗೆ ಲಸಿಕೆ



◆ ನೈಜ್ಯ ದೆಸೆ ನ್ಯೂಸ್

ಮುದ್ದೇಬಿಹಾಳ,: ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನಕ್ಕೆ ಪಟ್ಟಣದಲ್ಲಿ ತಹಶೀಲ್ದಾರ್ ಶ್ರೀಮತಿ ಕೀರ್ತಿ ಚಾಲಕ ಅವರು ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆಯ ಹನಿಗಳನ್ನು ಹಾಕುವ ಮೂಲಕ ಭಾನುವಾರ ಚಾಲನೆ ನೀಡಿದರು.ಬಳಿಕ ಮಾತನಾಡಿದ ಅವರು, ಪೋಲಿಯೋ ಮುಕ್ತ ಸಮಾಜ ನಿರ್ಮಾಣಕ್ಕೆ ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ತಪ್ಪದೇ ಪೋಲಿಯೋ ಲಸಿಕೆ ಹಾಕಿಸುವುದು ಅತ್ಯಗತ್ಯವಾಗಿದೆ. ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಪೋಷಕರು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.ನಂತರ ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನವನ್ನು ಯಶಸ್ವಿಗೊಳಿಸಲು ಸಾರ್ವಜನಿಕರು ಕೈಜೋಡಿಸಬೇಕು. ಐದು ವರ್ಷದೊಳಗಿನ ಪ್ರತಿಯೊಬ್ಬ ಮಗುವಿಗೂ ತಪ್ಪದೆ ಪೋಲಿಯೋ ಹನಿ ಹಾಕಿಸುವ ಮೂಲಕ ಮಕ್ಕಳ ಆರೋಗ್ಯ ರಕ್ಷಣೆಗೆ ಎಲ್ಲರೂ ಸಹಕರಿಸಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ತಾಲೂಕು ಆರೋಗ್ಯಾಧಿಕಾರಿ ಡಾ. ಸತೀಶ್ ಭಗವಾನ್, ರಾಷ್ಟ್ರವನ್ನು ಪೋಲಿಯೋ ಮುಕ್ತವಾಗಿಡಲು ಪ್ರತಿಯೊಬ್ಬ ಪೋಷಕರ ಸಹಕಾರ ಅಗತ್ಯವಾಗಿದೆ. ಯಾವುದೇ ಕಾರಣಕ್ಕೂ ಐದು ವರ್ಷದೊಳಗಿನ ಮಕ್ಕಳು ಪೋಲಿಯೋ ಲಸಿಕೆಯಿಂದ ವಂಚಿತರಾಗಬಾರದು. ಇದಕ್ಕಾಗಿ ಆರೋಗ್ಯ ಇಲಾಖೆಯ ಸಿಬ್ಬಂದಿ ಮನೆ-ಮನೆಗೆ ಭೇಟಿ ನೀಡಿ ಲಸಿಕೆ ನೀಡಲಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು. ಅವರು ಮಾತನಾಡಿ, ತಾಲೂಕಿನಲ್ಲಿ ಒಟ್ಟು 4,846 ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡುವ ಗುರಿ ಹೊಂದಲಾಗಿದ್ದು, ಅಭಿಯಾನದ ಮೊದಲ ದಿನವೇ 4,464 ಮಕ್ಕಳಿಗೆ ಪೋಲಿಯೋ ಹನಿ ನೀಡಲಾಗಿದೆ. ಉಳಿದ ಮಕ್ಕಳಿಗೂ ಮುಂದಿನ ಹಂತದಲ್ಲಿ ಲಸಿಕೆ ನೀಡಲಾಗುವುದು ಎಂದು ಮಾಹಿತಿ ನೀಡಿದರು.ಈ ಸಂದರ್ಭದಲ್ಲಿ ತಾಲೂಕು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ರಂಗನಾಥ್ ವೈದ್ಯ, ಆರೋಗ್ಯ ರಕ್ಷಾ ಸಮಿತಿಯ ಅಧ್ಯಕ್ಷ ವಿಜಯಕುಮಾರ ಗೂಳಿ, ಶ್ರೀ ಕಟ್ಟಿಮನಿ ಸೇರಿದಂತೆ ವಿವಿಧ ಗಣ್ಯರು, ಆರೋಗ್ಯ ಇಲಾಖೆಯ ಅಧಿಕಾ-ರಿಗಳು, ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು

## ಮುಧೋಳ : 1977–84 ನೇ ಸಾಲಿನ ವಿದ್ಯಾರ್ಥಿಗಳಿಂದ 'ಗುರುವಂದನಾ ಮತ್ತು ಸ್ನೇಹ ಸಂಗಮ' ಸಂಭ್ರಮ

◆ ನೈಜ್ಯ ದೆಸೆ ನ್ಯೂಸ್




ಮುಧೋಳ, ಜೂ. 28: ಮುಧೋಳದ ರನ್ನ ಸರಕಾರಿ ಮಾದರಿ ಶಾಲೆಯಲ್ಲಿ 1977 ರಿಂದ 1984 ರವರೆಗೆ ವ್ಯಾಸಂಗ ಮಾಡಿದ ಹಳೆಯ ವಿದ್ಯಾರ್ಥಿಗಳ "ಮುಧೋಳ ಸ್ನೇಹ ಬಳಗ" ದಿಂದ ಭಾನುವಾರ ಡಾ. ಬಿ. ಆರ್. ಅಂಬೇಡ್ಕರ ಭವನ, ಲೋಕಾಪುರ ರಸ್ತೆ, ಮುಧೋಳದಲ್ಲಿ "ಗುರುವಂದನಾ ಮತ್ತು ಸ್ನೇಹ ಸಂಗಮ ಸಮಾರಂಭ" ವಿಜೃಂಭಣೆಯಿಂದ ಜರುಗಿ-ತು.ಬೆಳಿಗ್ಗೆ 9–00 ಗಂಟೆಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ 40 ವರ್ಷಗಳ ನಂತರ ಒಟ್ಟುಗೂಡಿದ ಸುಮಾರು 50 ಕ್ಕೂ ಹೆಚ್ಚು ಹಳೆ ವಿದ್ಯಾರ್ಥಿಗಳು, ತಮಗೆ ವಿದ್ಯಾದಾನ ಮಾಡಿದ ಗುರುಗಳನ್ನು ಸನ್ಮಾನಿಸಿ ಕೃತಜ್ಞತೆ ಸಲ್ಲಿಸಿದರು.ಸನ್ಮಾನಿತ ಶಿಕ್ಷಕರ ವೃಂದ:ಶ್ರೀಮತಿ ಪಾರ್ವತಿ ಕುಬಸದ, ಶ್ರೀ ಎಸ್. ಡಿ. ಬಿಳ್ಳೂರ, ಶ್ರೀ ಜೆ. ಆಯ್. ಮನಿಯಾರ, ಶ್ರೀ ಎಸ್. ಕೆ. ಹೊಸಕೋಟಿ, ಶ್ರೀ ಟಿ. ಕೆ. ಹಂಚಾಟೆ, ಶ್ರೀ ಎಂ. ಆರ್. ಬಾಗಣೆ, ಶ್ರೀಮತಿ ಸುಭದ್ರಮ್ಮ ತುಗ್ಗಿ, ಶ್ರೀಮತಿ ಅಗ್ನಿಹೋತ್ರಿ ಸೇರಿದಂತೆ ಹಿರಿಯ ಗುರುಗಳನ್ನು ಶಾಲು, ಸ್ಮರಣಿಕೆ ನೀಡಿ ಗೌರವಿಸಲಾಯಿತು.ಕಾರ್ಯಕ್ರಮದ ವಿಶೇಷ:- "ಗುರು ಬ್ರಹ್ಮ ಗುರು ವಿಷ್ಣು ಗುರುದೇವೋ ಮಹೇಶ್ವರ" ಎಂಬ ಶ್ಲೋಕದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ- ಎಲ್ಲ ವಿದ್ಯಾರ್ಥಿಗಳು ಕೇಸರಿ ಪೇಟ, ಬ್ಯಾಡ್ಜ್ ಧರಿಸಿ ಸಂಭ್ರಮಿಸಿದರು- ಮಹಿಳೆಯರು ವರ್ಣರಂಜಿತ ಸೀರೆಗಳಿಂದ ಕಂಗೊಳಿಸಿದರು- "ಜ್ಞಾನದೀಪ ಹಚ್ಚಿ ನಮ್ಮ ಜೀವನಕ್ಕೆ ದಾರಿದೀಪವಾದ ಪೂಜ್ಯ ಗುರುಗಳಿಗೆ ಕೃತಜ್ಞತೆಯ ನಮನ" ಸಲ್ಲಿಸಲಾಯಿತು ಈ ವೇಳೆ ಮಾತನಾಡಿದ ಹಳೆ ವಿದ್ಯಾರ್ಥಿಗಳು, "ನಾಲ್ಕು ದಶಕ ಕಳೆದರೂ ಗುರು-ಶಿಷ್ಯರ ಬಾಂಧವ್ಯ ಹಾಗೇ ಇದೆ. ಇಂದು ನಾವೆಲ್ಲ ಉನ್ನತ ಸ್ಥಾನದಲ್ಲಿರಲು ನಮ್ಮ ಶಿಕ್ಷಕರ ಆಶೀರ್ವಾದವೇ ಕಾರಣ" ಎಂದು ಭಾವುಕರಾದರು.ಸನ್ಮಾನ ಸ್ವೀಕರಿಸಿ ಮಾತನಾಡಿದ ಶಿಕ್ಷಕರು, "ನಮ್ಮ ವಿದ್ಯಾರ್ಥಿಗಳ ಸಾಧನೆ ನೋಡಿ ಹೆಮ್ಮೆಯಾಗುತ್ತಿದೆ. ಇಂತಹ ಕಾರ್ಯಕ್ರಮಗಳು ಹೊಸ ಪೀಳಿಗೆಗೆ ಮಾದರಿ" ಎಂದರು.ಸರ್ವರಿಗೂ ಹಾರ್ದಿಕ ಸ್ವಾಗತ ಕೋರಿದ್ದ ವಿದ್ಯಾರ್ಥಿಗಳು ನ್ಯಾಯವಾದಿ ಸಹದೇವ ಸಾವಂತ ,ಸಾಯಿನಾಥ್ ಘಾಟಗೆ, ಬಾಳು ಸಿಂಗ್ ರಜಪೂತ ,ರವಿಂದ್ರ ಬಂಗಾರಪ್ಪನವರ ಜಿಲ್ಲಾ ಪಂಚಾಯತ್ ಆಫಿಸರ ಬೆಳಗಾವಿ ,ಪಿರೋಜ ಇಂಡಿ-ಕಾರ ಸಿ ಪಿ ಆಯ್ ಆಲಮಟ್ಟಿ, ದಿಲಿಪ ಅಡೆಕರ, ಸಂಜಯ ದೇವರಮನಿ, ವಿದ್ಯಾರ್ಥಿನಿ ರೇಖಾ ಚಿಪ್ಪಲಕಟ್ಟಿ , ಸರೋಜನಿ ಹಳ್ಳದ, ವಿಜಯಭಾರತಿ ಶಿಂತ್ರೆ, ಭಾರತಿ ಜಿರಲಿ, ಹಾಗೂ ಅನೇಕ ವಿಧ್ಯಾರ್ಥಿನಿ ವಿದ್ಯಾರ್ಥಿಗಳು ಸಮ್ಮುಖದಲ್ಲಿ ಕಾರ್ಯಕ್ರಮ,ಯಶಸ್ವಿಗೊಳಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

## ಸಾಹಿತ್ಯ ಸಿಂಚನ

ಬದುಕು ಜಟಕಾ ಬಂಡಿ

ಬದುಕು ಅಂದ್ರೆ ಜಟಕಾ ಬಂಡಿ
ಏರಿಳಿತದ ದಾರಿಯಲ್ಲಿ ಸಾಗೋ ಗಾಡಿ
ಕೆಲವೊಮ್ಮೆ ಕುದುರೆ ಜೋರಾಗಿ ಓಡುತ್ತೆ
ಕೆಲವೊಮ್ಮೆ ಚಕ್ರ ಹೂತು ನಿಂತಿರುತ್ತೆ

ಹಳ್ಳ ತಗ್ಗು ಬಂದ್ರೆ ಕುಲುಕಿ ಬಿಡುತ್ತೆ
ಸವಾರಿ ಮಾಡೋ ನಮಗೆ ತಲೆ ತಿರುಗುತ್ತೆ
ಹಿಡಿಯೋ ಲಗಾಮು ಕೈಗೆ ಸಿಗೋದಿಲ್ಲ
ಬೀಳೋ ಭಯ, ಆದ್ರೆ ಇಳಿಯೋ ಹಾಗೂ ಇಲ್ಲ

ಕಷ್ಟ ಬಂದ್ರೆ ಗಾಡಿ ಭಾರ ಆಗುತ್ತೆ
ಕುದುರೆನೂ ಸುಸ್ತಾಗಿ ನಿಧಾನ ಆಗುತ್ತೆ
ಆದ್ರೆ ನಿಲ್ಲಿಸೋ ಹಾಗಿಲ್ಲ
ಮುಂದೆ ಸಾಗಲೇಬೇಕು, ಇದೇ ಜಟಕಾ ನಿಯಮ

ಖುಷಿ ಬಂದ್ರೆ ಗಾಡಿ ಹಗುರ ಆಗುತ್ತೆ
ಗಾಳಿಗೆ ತೇಲಿದಂಗೆ ಸಾಗುತ್ತೆ
ಆ ಕ್ಷಣ ಜೀವನ ಸ್ವರ್ಗ ಆಗುತ್ತೆ
ಆದ್ರೆ ಅದು ಹೆಚ್ಚು ಹೊತ್ತು ಇರೋದಿಲ್ಲ

ಈ ಜಟಕಾ ಬಂಡಿಯಲ್ಲಿ ಎಲ್ಲ ಇದ್ದಾರೆ
ದುಃಖ, ನೋವು, ನಗು, ನೆನಪು
ಕೆಲವರು ದಾರಿ ಮಧ್ಯೆ ಇಳಿದು ಹೋಗ್ತಾರೆ
ಹೊಸಬರು ಹತ್ತಿ ಜೊತೆಗೆ ಬರ್ತಾರೆ

ಸವಾರಿ ಮಾಡೋ ನಾವೇ ಮಾಲೀಕ
ಆದ್ರೆ ದಾರಿ ನಮ್ಮ ಕೈಲಿ ಇಲ್ಲ
ಹೋಗಬೇಕಾದ ಜಾಗ ಗೊತ್ತಿಲ್ಲ
ಆದ್ರೂ ಹೊರಟಿದ್ದೀವಿ, ನಿಲ್ಲೋದಿಲ್ಲ

ಹಾಗಾಗಿ ಗುರು, ಅಳೋದು ಬೇಡ
ಈ ಜಟಕಾ ಬಂಡಿ ನಿಂತರೆ ಸಾವು
ಕುಲುಕಿದ್ರೂ ಕೂತಿರು ಗಟ್ಟಿಯಾಗಿ
ಒಂದು ದಿನ ಗುರಿ ಸೇರುತ್ತೆ ಈ ಗಾಡಿ

ಕಷ್ಟ ಬಂದ್ರೆ ಕುದುರೆಗೆ ನೀರು ಕುಡಿಸು
ಖುಷಿ ಬಂದ್ರೆ ಹಾಡು ಹೇಳಿಕೊಂಡು ಹೋಗು
ಜೀವನ ಅಂದ್ರೆ ಇದೇ
ಏರಿಳಿತ ಇದ್ರೇನೇ ಬದುಕಿಗೆ ರುಚಿ

ಎಸ್.ದುರಗಪ್ಪ.ಕುಷ್ಟಗಿ.

# ಗುಣಮಟ್ಟದಲ್ಲಿ ಯಾವುದೇ ರಾಜಿ ಬೇಡ ; ಶೀಘ್ರ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಸಮರ್ಪಿಸಿ – ಬಸನಗೌಡ ಬಾದರ್ಲಿ

◆ ನೈಜ್ಯ ದೆಸೆ ನ್ಯೂಸ್




ಸಿಂಧನೂರು, ಜೂನ್ 28: ಸಿಂಧನೂರು ತಾಲೂಕಿನಲ್ಲಿ ನಿರ್ಮಾಣ ಹಂತದಲ್ಲಿರುವ ಮಹತ್ವಾಕಾಂಕ್ಷೆಯ 200 ಹಾಸಿಗೆಗಳ ಸರ್ಕಾರಿ ಆಸ್ಪತ್ರೆ ಕಾಮಗಾರಿಯನ್ನು ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಅವರು ಭಾನುವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಆಸ್ಪತ್ರೆಯ ವಿವಿಧ ಕಟ್ಟಡಗಳ ನಿರ್ಮಾಣ ಪ್ರಗತಿ, ಕಾಮಗಾರಿಯ ಗುಣಮಟ್ಟ, ಬಳಸಲಾಗುತ್ತಿರುವ ನಿರ್ಮಾಣ ಸಾಮಗ್ರಿಗಳು ಹಾಗೂ ಮೂಲಸೌಕರ್ಯಗಳ ಕುರಿತು ಅಧಿಕಾರಿಗಳು ಮತ್ತು ಗುತ್ತಿಗೆದಾರ–ರಿಂದ ಸಮಗ್ರ ಮಾಹಿತಿ ಪಡೆದುಕೊಂಡರು. ಪರಿಶೀಲನೆ ವೇಳೆ ಕೆಲವು ಭಾಗಗಳಲ್ಲಿ ಕಾಮಗಾರಿಯ ಗುಣಮಟ್ಟದಲ್ಲಿ ಲೋಪಗಳು ಕಂಡುಬಂದ ಹಿನ್ನೆಲೆಯಲ್ಲಿ, ಸಂಬಂಧಿಸಿದ ಗುತ್ತಿಗೆದಾರರು ಹಾಗೂ ಅಧಿಕಾ–ರಿಗಳನ್ನು ತರಾಟೆಗೆ ತೆಗೆದುಕೊಂಡ ಅವರು, ಯಾವುದೇ ಕಾರಣಕ್ಕೂ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ, ಎಲ್ಲಾ ಲೋಪಗಳನ್ನು ತಕ್ಷಣ ಸರಿಪಡಿಸಿ, ಸರ್ಕಾರದ ನಿಗದಿತ ಮಾನದಂಡಗಳಿಗೆ ಅನುಗುಣವಾಗಿ ಅತ್ಯುತ್ತಮ ಗುಣಮಟ್ಟದಲ್ಲಿ ಕಾಮಗಾ–ರಿಯನ್ನು ಪೂರ್ಣಗೊಳಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.ಈ ಸಂದರ್ಭದಲ್ಲಿ ಮಾತನಾಡಿದ ಬಸನಗೌಡ ಬಾದರ್ಲಿ ಅವರು, "200 ಹಾಸಿಗೆಗಳ ಆಸ್ಪತ್ರೆ ಸಿಂಧನೂರು ಹಾಗೂ ಸುತ್ತಮುತ್ತಲಿನ ಸಾವಿರಾರು ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ಪ್ರಮುಖ ಯೋಜನೆಯಾಗಿದೆ. ಆದ್ದರಿಂದ ಈ ಆಸ್ಪತ್ರೆಯ ನಿರ್ಮಾಣವು ಕೇವಲ ಕಟ್ಟಡ ನಿರ್ಮಾಣವಾಗಿರದೆ, ಜನರ ಜೀವ ರಕ್ಷಿಸುವ ಆರೋಗ್ಯ ಕೇಂದ್ರವಾಗಲಿದೆ. ಹೀಗಾಗಿ ಕಾಮಗಾರಿಯ ಪ್ರತಿಯೊಂದು ಹಂತದಲ್ಲೂ ಗುಣಮಟ್ಟಕ್ಕೆ ಹೆಚ್ಚಿನ ಆದ–'ೃತೆ ನೀಡಬೇಕು" ಎಂದು ಹೇಳಿದರು.ಇನ್ನೂ ಅವರು, "ಸರ್ಕಾರ ಸಾರ್ವಜನಿಕರ ತೆರಿಗೆ ಹಣದಿಂದ ಈ ಆಸ್ಪತ್ರೆಯನ್ನು ನಿರ್ಮಿಸುತ್ತಿದೆ. ಆದ್ದರಿಂದ ಪ್ರತಿಯೊಂದು ರೂಪಾಯಿಯೂ ಸಮರ್ಪಕವಾಗಿ ಬಳಕೆಯಾಗಬೇಕು. ನಿರ್ಮಾಣದಲ್ಲಿ ಯಾವುದೇ ನಿರ್ಲಕ್ಷ್ಯ ಅಥ–'ವಾ ಕಳಪೆ ಕಾಮಗಾರಿಗೆ ಅವಕಾಶವಿಲ್ಲ. ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ, ಸಾರ್ವಜನಿಕರ ಸೇವೆಗೆ ಶೀಘ್ರದಲ್ಲೇ ಸಮರ್ಪಿಸಬೇಕು. ಆಸ್ಪತ್ರೆಯಲ್ಲಿ ಆಧುನಿಕ ಸೌಲಭ್ಯಗಳು, ಉತ್ತಮ ಚಿಕಿತ್ಸೆ ಹಾಗೂ ರೋಗಿಗಳಿಗೆ ಅಗತ್ಯವಾದ ಎಲ್ಲ ಮೂಲಸೌಕರ್ಯಗಳು ಲಭ್ಯವಾಗುವಂತೆ ಅಧಿಕಾರಿಗಳು ಕ್ರಮವಹಿಸಬೇಕು" ಎಂದು ಸೂಚಿಸಿದರು.ಸ್ಥಳದಲ್ಲಿದ್ದ ಅಧಿಕಾರಿಗಳು ಆಸ್ಪತ್ರೆ ನಿರ್ಮಾಣದ ಪ್ರಗತಿ ಕುರಿತು ವಿವರ ನೀಡಿದರು. ಆಸ್ಪತ್ರೆಯಲ್ಲಿ ಒಳರೋಗಿ ಹಾಗೂ ಹೊರರೋಗಿ ವಿಭಾಗಗಳು, ತುರ್ತು ಚಿಕಿತ್ಸಾ ವಿಭಾಗ, ಶಸ್ತ್ರಚಿಕಿತ್ಸಾ ಕೊಠಡಿಗಳು, ತಾಯಿ–ಮಕ್ಕಳ ಆರೈಕೆ ವಿಭಾಗ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಪರಿಶೀಲನೆಯ ವೇಳೆ ಸ್ಥಳೀಯ ಸಾರ್ವಜನಿಕರು ಆಸ್ಪತ್ರೆಯ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಸಮರ್ಪಿಸುವಂತೆ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಬಸನಗೌಡ ಬಾದರ್ಲಿ ಅವರು, "ಜನರ ನಿರೀಕ್ಷೆಗೆ ತಕ್ಕಂತೆ ಗುಣಮಟ್ಟದ ಆಸ್ಪತ್ರೆ ನಿರ್ಮಾಣವಾಗುವಂತೆ ನಿರಂತರವಾಗಿ ಮೇಲ್ವಿಚಾರಣೆ ನಡೆಸಲಾಗುವುದು. ಯಾವುದೇ ಲೋಪ ಕಂಡುಬಂದರೂ ಅದನ್ನು ತಕ್ಷಣ ಸರಿಪಡಿಸುವಂತೆ ಕ್ರಮ ಕೈಗೊಳ್ಳಲಾಗುತ್ತದೆ" ಎಂದು ಭರವಸೆ ನೀಡಿದರು.ಈ ಸಂದರ್ಭದಲ್ಲಿ ಆಸ್ಪತ್ರೆಯ ಸಿಬ್ಬಂದಿ, ಸಂಬಂಧಿತ ಇಲಾಖೆಯ ಅಧಿಕಾರಿಗಳು, ಗುತ್ತಿಗೆದಾರರು, ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಆಸ್ಪತ್ರೆಯ ಕಾಮಗಾರಿ ಶೀಘ್ರ ಪೂರ್ಣಗೊಂಡು ಜನಸಾಮಾನ್ಯರಿಗೆ ಉತ್ತಮ ಆರೋಗ್ಯ ಸೇವೆ ದೊರೆಯಲಿ ಎಂಬ ಆಶಯವನ್ನು ಎಲ್ಲರೂ ವ್ಯಕ್ತಪಡಿಸಿದರು.





ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಎರಡು ಹನಿ ಜೀವ ರಕ್ಷಕ – ಪೋಲಿಯೋ ಮುಕ್ತ ಸಮಾಜ ನಿರ್ಮಾಣ ನಮ್ಮೆಲ್ಲರ ಸಂಕಲ್ಪ: ಬಸನಗೌಡ ಬಾದರ್ಲಿ

◆ ನೈಜ್ಯ ದೆಸೆ ನ್ಯೂಸ್





ಸಿಂಧನೂರು, ಜೂನ್ 28: ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದ ಅಂಗವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಸಿಂಧನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಅವರು ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಮಾತನಾಡಿದ ಅವರು, "ಪೋಲಿಯೋ ರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿ ಆರೋಗ್ಯವಂತ ಸಮಾಜ ನಿರ್ಮಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ತಪ್ಪದೇ ಪೋಲಿಯೋ ಲಸಿಕೆ ನೀಡಿಸುವುದು ಪ್ರತಿಯೊಬ್ಬ ಪೋಷಕರ ಆದ್ಯ ಕರ್ತವ್ಯವಾಗಿದೆ. ಎರಡು ಹನಿ ಪೋಲಿಯೋ ಲಸಿಕೆ ಮಗುವಿನ ಜೀವನವನ್ನು ಅಂಗವೈಕಲ್ಯದಿಂದ ರಕ್ಷಿಸುವ ಅಮೂಲ್ಯ ಔಷಧಿಯಾಗಿದ್ದು, ಯಾವುದೇ ಮಗು ಈ ಲಸಿಕೆಯಿಂದ ವಂಚಿತವಾಗದಂತೆ ಎಲ್ಲರೂ ಜಾಗೃತಿ ವಹಿಸಬೇಕು" ಎಂದು ಕರೆ ನೀಡಿದರು.ದೇಶದಲ್ಲಿ ಪೋಲಿಯೋ ನಿರ್ಮೂಲನೆ ಸಾಧನೆಯಾಗಿದ್ದರೂ, ಆ ಸಾಧನೆಯನ್ನು ಮುಂದುವ–ರಿಸಿಕೊಂಡು ಹೋಗಲು ಪ್ರತಿಯೊಂದು ಪಲ್ಸ್ ಪೋಲಿಯೋ ಅಭಿಯಾನವನ್ನು ಯಶಸ್ವಿಗೊಳಿಸುವುದು ಅಗತ್ಯವಾಗಿದೆ. ಆರೋಗ್ಯ ಇಲಾಖೆಯ ಅಧಿಕಾರಿಗಳು, ವೈದ್ಯರು, ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮನೆಮನೆಗೆ ತೆರಳಿ ಸಲ್ಲಿಸುತ್ತಿರುವ ಸೇವೆ ಶ್ಲಾಘನೀಯವಾಗಿದ್ದು, ಸಾರ್ವಜನಿಕರು ಅವರೊಂದಿಗೆ ಸಹಕರಿಸಬೇಕು ಎಂದು ಹೇಳಿದರು.ಈ ಸಂದರ್ಭದಲ್ಲಿ ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಸುರೇಶ್ ಗೌಡ, ತಾಲೂಕು ಆರೋಗ್ಯಾಧಿಕಾರಿ ಡಾ. ಅಯ್ಯನಗೌಡ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾ–ರಿಯಾದ ಲಿಂಗನಗೌಡ, ಆರೋಗ್ಯ ಇಲಾಖೆಯ ವೈದ್ಯರು ಹಾಗೂ ಸಿಬ್ಬಂದಿ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಪೋಷಕರು, ಮಕ್ಕಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ: ಮಾನ್ಯ ಶಾಸಕರಾದ ಹಂಪನಗೌಡ ಬಾದರ್ಲಿ

◆ ನೈಜ್ಯ ದೆಸೆ ನ್ಯೂಸ್




ಸಿಂಧನೂರು ಜೂನ 28: ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ವಿವಿಧ ಇಲಾಖೆಗಳ ಸಹಕಾರದಲ್ಲಿ ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಆರೋಗ್ಯ ಇಲಾಖೆಯಿಂದ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ಹಾಕಬೇಕು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.ಕಾರ್ಯಕ್ರಮವನ್ನು ಮಾನ್ಯ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಉದ್ಘಾಟಿಸಿ ಚಾಲನೆ ನೀಡಿದರು.ನಂತರ ಮಾತನಾಡಿದವರು ಮಕ್ಕಳ ಆರೋಗ್ಯಕ್ಕಾಗಿ ಪ್ರತಿಯೊಬ್ಬ ತಾಯಂದಿರು ತಮ್ಮ ಮಕ್ಕಳಿಗೆ ಪೋಲಿಯೋ ಹನಿ ಕಡ್ಡಾಯವಾಗಿ ಹಾಕಿಸಬೇಕು ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಪೋಲಿಯೋ ಹನಿ ಸಹಾಯ ಮಾಡುತ್ತದೆ. ಯಾವುದೇ ಮಗು ಪೋಲಿಯೋ ಹನಿಯಿಂದ ಹೊರಗೆ ಉಳಿಯದಂತೆ. ಪ್ರತಿಯೊಬ್ಬ ಸಿಬ್ಬಂದಿ ವರ್ಗದವರು ಕೆಲಸ ಮಾಡಬೇಕು ಯಾವುದೇ ಮಗು ಪೋಲಿಯೋ ಲಸಿಕೆ ಯಿಂದ ವಂಚಿತರಾಗದಂತೆ ನೋಡಿಕೊಳ್ಳಿ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಉತ್ತಮ ಗುಣಮಟ್ಟದ ಸೇವೆಯನ್ನು ನೀಡಬೇಕು ಎಂದರು. ನಂತರ ಮಾತನಾಡಿದ ತಾಲೂಕ ವೈದ್ಯಾಧಿಕಾ–ರಿಗಳಾದ ಡಾಕ್ಟರ ಅಯ್ಯನ ಗೌಡ ಅವರು ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಒಟ್ಟು ತಾಲೂಕಿನ ವ್ಯಾಪ್ತಿಯಲ್ಲಿ 45571 ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಗು–ರಿಯನ್ನು ಹೊಂದಲಾಗಿದೆ. ನಗರದಲ್ಲಿ 8290 ಗ್ರಾಮೀಣ ಪ್ರದೇಶದಲ್ಲಿ 37281 ಮಕ್ಕಳ ಗು–ರಿಯನ್ನು ಹೊಂದಲಾಗಿದೆ 248 ಪೋಲಿಯೋ ಭೂತಗಳು ಕಾರ್ಯನಿರ್ವಹಿಸುತ್ತಿವೆ. 15 ಮೊಬೈಲ್ ಟೀಮ್ 14 ಟ್ರಾನ್ಸಜಿಟ್ ಪಾಯಿಂಟ್ ಮಾಡಿಸಲಾಗಿದೆ ಬಸ್ಸು ನಿಲ್ದಾಣ ರೈಲು ನಿಲ್ದಾಣ ಹೊರ ಹೊಲಯದಲ್ಲಿ ಈ ಭೂತಗಳು ಕಾರ್ಯನಿರ್ವಹಿಸುತ್ತಿವೆ ಒಟ್ಟಾರೆಯಾಗಿ ದಿನಾಂಕ 28/06/2026 ರಿಂದ 01/07/2026 ಪಲ್ಸ್ ಪೋಲಿಯೋ ಕಾರ್ಯಕ್ರಮ ನೆಡೆಯುತ್ತಿದ್ದು ಯಾವುದೇ ಮಗು ಪೋಲಿಯೋ ಹನಿಯಿಂದ ಯಿಂದ ವಂಚಿತರಾಗಿದಂತೆ ನೋಡಿಕೊಳ್ಳಲಾಗುತ್ತದೆ. ಎಂದರು.ಈ ಸಂದರ್ಭದಲ್ಲಿ ಜಿಲ್ಲೆಯಿಂದ ಆಗಮಿಸಿದ ಪಲ್ಸ್ ಪೋಲಿಯೋ ನೋಡೆಲ್ ಅಧಿಕಾರಿಗಳಾದ ಪ್ರಮೀಣ ಕುಮಾರ . ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾ–ರಿಗಳಾದ ಡಾಕ್ಟರ ಕಾವೇರಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಗಳಾದ ನಿಂಗನಗೌಡ. ತಾಲೂಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾ–ರಿಗಳಾದ ಸುರೇಶಗೌಡ ಡಾಕ್ಟರ ಶಿವಾನಂದ . ಸುಧಾರಾಣಿ ಅಧೀಕ್ಷಕರು ತಾಯಿ ಮತ್ತು ಮಕ್ಕಳ ಆಸ್ಪತ್ರೆ. ಹಿರಿಯ ಆರೋಗ್ಯ ನಿರೀಕ್ಷಣಾ ಅಧಿಕಾ–ರಿಗಳು ರಂಗನಾಥ . ಮತ್ತು ಸಂಗನಗೌಡ ತಾಲೂಕ ಮಟ್ಟದ ಮೇಲ್ವಿಚಾರಕರಾದ ಎಫ್. ಎ. ಹಣಗಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ. ಶುಶ್ರೂಷಕ ಅಧಿಕಾ–ರಿಗಳು ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು ಆರೋಗ್ಯ ನಿರೀಕ್ಷಣಾ ಅಧಿಕಾ–ರಿಗಳು ಮತ್ತು ಸಿಬ್ಬಂದಿ ವರ್ಗದವರು ಮತ್ತು ಇನ್ನಿತರರು ಉಪಸ್ಥಿತರಿದ್ದರು





# ಅರಕೇರಾದಲ್ಲಿ ಬಿಜೆಪಿ ಮಹಿಳಾ ಮೋರ್ಚಾದ ಡಿಜಿಟಲ್ ಕಲಿಕಾ ತರಬೇತಿ ಕಾರ್ಯಕ್ರಮ ಯಶಸ್ವಿ

◆ ನೈಜ್ಯ ದೆಸೆ ನ್ಯೂಸ್



ಅರಕೇರಾ : ಭಾರತೀಯ ಜನತಾ ಪಕ್ಷದ ಮಹಿಳಾ ಮೋರ್ಚಾ ಕಾರ್ಯಕರ್ತೆಯರಿಗೆ ರಾಯಚೂರು ಜಿಲ್ಲಾ ಅಧ್ಯಕ್ಷರಾದ ವಿಜಯ ರಾಜೇಶ್ವರಿಯವರು ಡಿಜಿಟಲ್ ಕಲಿಕಾ ತರಬೇತಿ ಕಾರ್ಯಕ್ರಮವನ್ನು ಅರಕೇರಾ ಪಟ್ಟಣದಲ್ಲಿ ಹಮ್ಮಿಕೊಂಡಿದ್ದರು.ತರಬೇತಿಯ ಉದ್ದೇಶಿಸಿ ಮಾತನಾಡಿದ ಅವರು ಮಹಿಳಾ ಕಾರ್ಯಕರ್ತೆಯರನ್ನು ಆಧುನಿಕ ತಂತ್ರಜ್ಞಾನದೊಂದಿಗೆ ಸಜ್ಜುಗೊಳಿಸಿ ಪಕ್ಷದ ಕಾರ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವ ಮಹತ್ವಾಕಾಂಕ್ಷೆಯ ಹೆಜ್ಜೆಯಾಗಿದೆ. ಎಂದು ಕಾರ್ಯಕರ್ತೆಯ–ರಿಗೆ ತಿಳಿಸಿದರು.ಡಿಜಿಟಲ್ ಯುಗದಲ್ಲಿ ರಾಜ–ಕೀಯ ಮತ್ತು ಸಾಮಾಜಿಕ ಸಬಲಿಕರಣ–ಕ್ಕೆ ತಂತ್ರಜ್ಞಾನ ಅರಿವು ಎಷ್ಟು ಅವಶ್ಯಕ ಎಂಬುವದನ್ನು ಈತರಬೇತಿಯಲ್ಲಿ ತಿಳಿಸಿದರು. ತರಬೇತಿಯು ಮಹಿಳಾ ಕಾರ್ಯಕರ್ತೆಯರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ,ತಂತ್ರಜ್ಞಾನದ ಅರಿವು ಮತ್ತು ಅದರ ಬಳಕೆಯ ಸಾಮಥ–'ರ್ಯವು ವ್ಯಕ್ತಿಯ ಸಬಲಿಕರಣಕ್ಕೆ ನೇರವಾಗಿ ಸಂಬಂಧಿಸಿದ ಡಿಜಿಟಲ್ ಕೌಶಲ್ಯಗಳನನ್ನು ಕರಗತ ಮಾಡಿಕೊಳ್ಳುವ ಮೂಲಕ ಮಹಿಳಾ ಕಾರ್ಯಕರ್ತೆಯರ ಪಾತ್ರವನ್ನು ಬಲಪಡಿಸುವ ಒಂದು ಮಹತ್ವದ ತರಬೇತಿ ಇದಾಗಿದೆಂದರು.ಮಾಜಿ ಸಚಿವರಾದ ಕೆ.ಶಿವನಗೌಡನಾಯಕರವರ ನಿವಾಸದಲ್ಲಿ ಜಿಲ್ಲಾ ಅಧ್ಯಕ್ಷರಾದ ವಿಜಯ ರಾಜೇಶ್ವ–ರಿಯವರಿಗೆ ಅವರ ತಾಯಿಯವರಾದ ಕೆ.ಮ'ಹಾದೇವಮ್ಮನಾಯಕರವರು ಸನ್ಮಾನಿಸಿಗೌರ'ವಿಸಿದರು.ಸಂದರ್ಭದಲ್ಲಿ ಬಿಜೆಪಿ ಹಿರಿಯ ಮುಖಂಡರಾದ ಕೆ.ಅನಂತರಾಜನಾಯಕ, ಕೆ.ನಾಗರಾಜ ದಳಪತಿ, ನಾಗರಾಜ ಅಬಕಾರಿ ಅರಕೇರಾ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಂಡಲದ ಮಹಿಳಾ ಮೋರ್ಚಾ ಅಧ್ಯಕ್ಷರಾದ ಶ್ರೀದೇವಿ ನೀಲಗಲ್ ಸಂಜನಾ ಹೊಸಮನಿ, ಹಾಗೂ ಮಹಿಳಾ ಮೋರ್ಚಾ ಪದಾಧಿಕಾರಿಗಳು ಉಪಸ್ಥಿತರಿದ್ದರು

# ನೇಮಕಾತಿ ಪ್ರಕಟಣೆ

**DHFWS ಧಾರವಾಡ ನೇಮಕಾತಿ 2026 – 15 ವೈದ್ಯಕೀಯ ಅಧಿಕಾರಿ, ಲ್ಯಾಬ್ ತಂತ್ರಜ್ಞ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ**

DHFWS ಧಾರವಾಡ ನೇಮಕಾತಿ 2026: 15 ವೈದ್ಯಕೀಯ ಅಧಿಕಾರಿ, ಲ್ಯಾಬ್ ತಂತ್ರಜ್ಞ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಧಾರವಾಡ ಜೂನ್ 2026 ರ ಅಧಿಕೃತ ಅಧಿಸೂಚನೆಯ ಮೂಲಕ ವೈದ್ಯಕೀಯ ಅಧಿಕಾರಿ, ಲ್ಯಾಬ್ ತಂತ್ರಜ್ಞ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಧಾರವಾಡ – ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30–ಜೂನ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು

ಅಧಿಕೃತ ವೆಬ್‌ಸೈಟ್ : dharwad.nic.in

## ಕಡ್ಡಾಯವಾಗಿ 5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕಿಸಿ : ಶಾಸಕ ಆರ್.ಬಸನಗೌಡ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪೋಲಿಯೊ ರೋಗದಿಂದ ರಕ್ಷಿಸುವ ಸಲುವಾಗಿ 5 ವರ್ಷದೊಳಗಿನ ಪ್ರತಿಯೊಂದು ಮಗುವಿದೆ ಎರಡು ಹನಿ ಪೋಲಿಯೊ ಲಸಿಕೆ ಹಾಕಿಸಬೇಕೆಂದು ಖಾದಿ ಗ್ರಾಮೋದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್.ಬನಸಗೌಡ ತುರವಿಹಾಳ ಹೇಳಿದರು.ಪಟ್ಟಣದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮಕ್ಕೆ ಭಾನುವಾರ ಚಾಲನೆ ನೀಡಿ ನಂತರ ಮಾತನಾಡಿದ ಅವರು ಪೋಲಿಯೋ ಮುಕ್ತ ಕರ್ನಾಟಕ ನಿರ್ಮಾಣ–ಕ್ಕಾಗಿ ಪ್ರತಿಯೊಬ್ಬ ಐದು ವರ್ಷದ ಒಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪಲ್ಸ್ ಪೋಲಿಯೋ ಲಸಿಕೆಯನ್ನು ಹಾಕಿಸಬೇಕು.ಮಗುವಿಗೆ ಈ ಹಿಂದೆ ಪೋಲಿಯೋ ಲಸಿಕೆ ಹಾಕಿಸಿದ್ದರೂ ಸಹ, ಸುರಕ್ಷತೆಯ ದೃಷ್ಟಿಯಿಂದ ಈ ಹೆಚ್ಚುವರಿ ಹನಿಗಳನ್ನು ಹಾಕಿಸಿ ಎಂದು ಮನವಿ ಮಾಡಿದರು. ಪೋಲಿಯೊ ಮುಕ್ತ ಭಾರತವನ್ನು ಕಾಪಾಡಿಕೊಳ್ಳುವುದು ಮತ್ತು 5 ವರ್ಷದೊಳಗಿನ



ಎಲ್ಲಾ ಮಕ್ಕಳಿಗೆ ಪೋಲಿಯೋ ಹನಿಗಳನ್ನು ಹಾಕಿಸಿ. ಸಮೀಪದ ಸರ್ಕಾರಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ವಿಶೇಷ ಬೂತ್‌ಗಳಲ್ಲಿ ಲಸಿಕೆ ಹಾಕಲಾಹುತ್ತದೆ. ಇದರ ಜತೆಗೆ ಸಂಚಾರಿ ತಂಡಗಳು ಮತ್ತು ಮನೆ–ಮನೆ ಭೇಟಿಯ ಮೂಲಕ ಲಸಿಕೆ ಹಾಕಲಾಗುತ್ತದೆ ಆದ್ದರಿಂದ ಪೋಷಕರು ಪ್ರತಿಯೊಬ್ಬ 5 ವರ್ಷದೊಳಗಿನ ಮಕ್ಕಳಿಗೆ ಲಸಿಕೆಯನ್ನು ಹಾಕಿಸಬೇಕು ಎಂದು ಮನವಿ ಮಾಡಿದರು.ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಎಪಿಎಂಸಿ ಅಧ್ಯಕ್ಷ ಸಿದ್ದನಗೌಡ ಮಾಟೂರು, ತಹಸಿಲ್ದಾರ್ ಮಂಜುನಾಥ ಭೋಗಾವತಿ, ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ, ವೈದ್ಯಾಧಿಕಾ–ರಿಗಳು ಹಾಗೂ ಆಶಾ ಕಾರ್ಯಕರ್ತೆಯರು ಅಂಗನವಾಡಿ ಕಾರ್ಯಕರ್ತರು ಸೇ–ರಿದಂತೆ ಇನ್ನಿತರ ಮುಖಂಡರಿದ್ದರು.

**ಸುಸಜ್ಜಿತ ಆಸ್ಪತ್ರೆ ನಿರ್ಮಿಸಲು ಅಗತ್ಯಕ್ರಮ – ಶಾಸಕ ಬಸನಗೌಡ ತುರ್ವಿಹಾಳ**

**ಮಸ್ಕಿ ಪಟ್ಟಣದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೇರಿ ಹಲವು ತಿಂಗಳು ಗತಿಸಿವೆ. ಆದರೆ ಜಾಗದ ಸಮಸ್ಯೆಯಿಂದ ಆಸ್ಪತ್ರೆ ನಿರ್ಮಾಣ ಕಾರ್ಯಕ್ಕೆ ಸಮಸ್ಯೆ ಉಂಟಾಗಿತ್ತು ಆದಷ್ಟು ಬೇಗ ಎಲ್ಲವನ್ನು ಸರಿಪಡಿಸಿ ಮೂರು ಕೋಟಿ ವೆಚ್ಚದಲ್ಲಿ ಕಾಮಗಾರಿ ನಿರ್ಮಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಸ್ಕಿ ಪಟ್ಟಣದಲ್ಲಿ ಸುಸಜ್ಜಿತವಾದ ಆಸ್ಪತ್ರೆಯನ್ನು ನಿರ್ಮಿಸಿ ಬಡ ರೋಗಿಗಳಿಗೆ ಅನುಕೂಲ ಮಾಡಲು ಎಲ್ಲಾ ರೀತಿಯ ಪ್ರಯತ್ನ ಮಾಡಲಾಗುತ್ತಿದೆ ಎಂದು ಶಾಸಕರು ತಿಳಿಸಿದರು**

## 5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಪೋಲಿಯೊ ಲಸಿಕೆ ಕಡ್ಡಾಯ : ಡಾ. ಶರಣಬಸವಗೌಡ

ನೈಜ್ಯ ದೆಸೆ ನ್ಯೂಸ್



**ಮಾನ್ವಿ, ಜೂ.28: 5 ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನದಡಿ ತಪ್ಪದೇ ಎರಡು ಹನಿ ಪೋಲಿಯೊ ಲಸಿಕೆ ಹಾಕಿಸಬೇಕು ಎಂದು ತಾಲೂಕು ವೈದ್ಯಾಧಿಕಾರಿ ಡಾ. ಶರಣಬಸವಗೌಡ ಹೇಳಿದರು.ಮಾನ್ವಿ ಪಟ್ಟಣದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನಕ್ಕೆ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.ಪೋಲಿಯೊ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಪ್ರತಿಯೊಬ್ಬ ಪೋಷಕರೂ ತಮ್ಮ 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೊ ಲಸಿಕೆ ಹಾಕಿಸಬೇಕು. ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಆರೋಗ್ಯ ಇಲಾಖೆ ಅಗತ್ಯ ಕ್ರಮ ಕೈಗೊಂಡಿದ್ದು, ಸಾರ್ವಜನಿಕರು ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.ಈ ಸಂದರ್ಭದಲ್ಲಿ ಮಕ್ಕಳ ತಜ್ಞ ಡಾ. ಶರಣಪ್ಪ ಡಿ., ಮುಖ್ಯ ವೈದ್ಯಾಧಿಕಾರಿ ಡಾ. ಸುಮನ್ ಸೇರಿದಂತೆ ಆರೋಗ್ಯ ಇಲಾಖೆ ವೈದ್ಯರು, ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು.**

## ಉಮಾಲೂಟಿ ಮೊರಾರ್ಜಿ ವಸತಿ ಶಾಲೆ ವಿದ್ಯಾರ್ಥಿಗಳಿಗೆ ಸೌಲಭ್ಯಗಳ ಕೊರತೆ ಆರೋಪ




ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕಿನ ಊಮಲೂಟಿ ಗ್ರಾಮದಲ್ಲಿರುವ ಮೋರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಸೌಲಭ್ಯಗಳು ದೊರೆಯುತ್ತಿಲ್ಲವೆಂದು ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾ ಯುವ ಘಟಕದ ತಾಲೂಕಾಧ್ಯಕ್ಷ ಮೌನೇಶ ಕಣ್ಣೂರು ಆರೋಪಿಸಿದರು.ಪಟ್ಟಣದ ಪತ್ರಿಕಾ ಭವದಲ್ಲಿ ರವಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೋರಾರ್ಜಿ ದೇಸಾಯಿ ವಸತಿ ಶಾಲೆ ಊಮಲೂಟಿಯಲ್ಲಿ ಸುಮಾರು 250 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದೆ. ಆದ–ರೆ ತುರವಿಹಾಳ ಪಟ್ಟಣದ ಮೊರಾರ್ಜಿ ವಸತಿ ಶಾಲೆಯ ಮಕ್ಕಳ್ಳನ್ನು ಊಮಲೂಟಿ ವಸತಿ ಶಾಲೆಯಲ್ಲಿ ಸೇರಿಸಿದ್ದರಿಂದ ಸುಮಾರು 600ಕ್ಕೂ ಹೆಚ್ಚು ವಿದ್ಯಾರ್ಥಿಗಳಾಗಿರುವುದರಿಂದ ವಿದ್ಯಾರ್ಥಿಗಳಿಗೆ ಸಮರ್ಪಕ ವಸತಿ, ಆಹಾರ, ಶುದ್ಧ ಕುಡಿಯುವ ನೀರು, ಆರೋಗ್ಯ ಸೌಲಭ್ಯ ಹಾಗೂ ಗುಣಮಟ್ಟದ ಶಿಕ್ಷಣ ದೊರೆಯುತ್ತಿಲ್ಲ. ದಾಖಲಾತಿ ಮೀರಿ ವಿದ್ಯಾರ್ಥಿಗಳಿರುವದ–ರಿಂದ ಸಮಸ್ಯೆಗಳು ಉಂಟಾಗಿದೆ. ಇದಲ್ಲದೇ ವಸತಿ ಶಾಲೆಯಲ್ಲಿರುವ ಮಕ್ಕಳನ್ನು ಪಾಲಕರು ಭೇಟಿಯಾಗಲು ತೆರಳಿದರೆ ಪ್ರಾಂಶುಪಾಲ ಗುರುಪಾದಪ್ಪಗೌಡ ಅಗೌರವದಿಂದ ವರ್ತಿಸುವುದರ ಜತೆಗೆ ಪಾಲಕರ ಫೋನ್ ಕರೆಗಳನ್ನು ಸ್ವೀಕ–ರಿಸುವುದಿಲ್ಲವೆಂದು ಆರೋಪಿಸಿದರು. ಆದ್ದರಿಂದ ಸಂಬಂಧಿಸಿದ ಇಲಾಖೆ ಮೇಲಾಧಿಕಾರಿಗಳು ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಪೂರಕವಾದ ಸೌಲಭ್ಯಗಳನ್ನು ಒದಗಿಸಬೇಕು. ಹೆಚ್ಚುವರಿ ವಿದ್ಯಾರ್ಥಿಗಳಿಗೆ ಅವಕಾಶ ನೀಡಬಾರದೆಂದು ಆಗ್ರಹಿಸಿದರು. ವಿದ್ಯಾರ್ಥಿಗಳ ಭವಿಷ್ಯ ಮತ್ತು ಆರೋಗ್ಯದ ಹಿತದೃಷ್ಟಿಯಿಂದ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಮತ್ತು ಶಾಸಕರು ತಕ್ಷಣ ಪರಿಹಾರ ಕಲ್ಪಿಸಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಈರಣ್ಣ ನಾಯಕ, ದೊಡ್ಡ ಜಕ್ಕಪ್ಪ, ಬಸವರಾಜ ಹಾಲಾಪೂರ, ಪಂಪಾಪತಿ ಇದ್ದರು.

## ಪೋಲಿಯೋ ಮುಕ್ತ ರಾಷ್ಟ್ರವನ್ನಾಗಿಸಲು ಸಹಕಾರ ಅಗತ್ಯ

ನೈಜ್ಯ ದೆಸೆ ನ್ಯೂಸ್



**ಅರಕೇರಾ : ಭಾರತವನ್ನು ಪೋಲಿಯೋ ಮುಕ್ತ ರಾಷ್ಟ್ರವನ್ನಾಗಿಸಲು ಪ್ರತಿಯೊಬ್ಬರ ಪೋಷಕರ ಸಹಕಾರ ಅಗತ್ಯ ಎಂದು ಕ್ರೈ ಸಂಸ್ಥೆ ಸಂಚಾಲಕ ರಾಮಣ್ಣ ಎನ್ ಗಣೇಕಲ್ ಹೇಳಿದರು. ತಾಲೂಕಿನ ಕ್ಯಾದಿಗ್ಗೇರಾ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಭಾಗವಹಿಸಿ ಭಾನುವಾರ ಮಾತನಾಡಿದರು. ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಕಡ್ಡಾಯವಾಗಿ ಪೋಲಿಯೋ ಲಸಿಕೆ ಹಾಕಿಸಬೇಕು. ಕೆಲವು ದೇಶಗಳಲ್ಲಿ ಇನ್ನೂ ಪೋಲಿಯೋ ಪ್ರಕರಣಗಳು ಕಂಡು ಬರುತ್ತಿರುವುದರಿಂದ ನಮ್ಮ ದೇಶದಲ್ಲಿಯೂ ಮರುಕಾಣಿಸಿಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಆದ್ದರಿಂದ ಮಕ್ಕಳ ಆರೋಗ್ಯದ ವಿಷಯದಲ್ಲಿ ಯಾವುದೇ ನಿರ್ಲಕ್ಷ್ಯ ಮಾಡದೆ ಪ್ರತಿ ಬಾರಿ ಪಲ್ಸ್ ಪೋಲಿಯೋ ಹನಿ ಹಾಕಿಸುವ ಮೂಲಕ ಪೋಲಿಯೋ ಮುಕ್ತ ಭಾರತದ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ಸಮುದಾಯ ಆರೋಗ್ಯಾಧಿಕಾರಿ ಕವಿತಾ, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಶಕುಂತಲಮ್ಮ, ಅಂಗನವಾಡಿ ಕಾರ್ಯಕರ್ತೆಯರಾದ ಶಾರದ ಪಾಟೀಲ್, ರೇಣುಕಾ, ಶಾಂತಮ್ಮ, ಶಾರದ ರಾಥೋಡ್, ಆಶಾ ಕಾರ್ಯಕರ್ತೆ ಕಾಂತಮ್ಮ, ಗ್ರಾಮ ಪಂಚಾಯಿತಿಯ ಬಿಲ್ ಕಲೆಕ್ಟರ್ ಜಾನಪ್ಪ ರಾಥೋಡ್ ಇತರರಿದ್ದರು**

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ರಾಯಚೂರು ಜಿಲ್ಲೆಯನ್ನು ತಕ್ಷಣವೇ ಬರಪೀಡಿತ ಪ್ರದೇಶವೆಂದು ಘೋಷಿಸಿ ರೈತರಿಗೆ ಸೂಕ್ತ ಪರಿಹಾರ ಒದಗಿಸಿ; ರಾಜ್ಯರೈತ ಸಂಘ ಹಾಗೂ ರೈತ ಸೇನೆ(ರಿ) ಜಿಲ್ಲಾ ಕಾರ್ಯಾಧ್ಯಕ್ಷ ಮುಜಾಹಿದ್ ಮರ್ಚೆಡ್ ಆಗ್ರಹ

ನೈಜ್ಯ ದೆಸೆ ನ್ಯೂಸ್

ರಾಯಚೂರು, ಜೂನ್ 28: ಈ ಬಾರಿ ಮುಂಗಾರು ಮಳೆಯ ಪ್ರಮಾಣವು ಸಾಮಾನ್ಯಕ್ಕಿಂತ ಕಡಿಮೆಯಾಗುವ ಸಾಧ್ಯತೆ ಬಗ್ಗೆ ಹವಾಮಾನ ಇಲಾಖೆ ಹಾಗೂ ಕೃಷಿ ಇಲಾಖೆಗೆ ಮೊದಲೇ ಮಾಹಿತಿ ಇದ್ದರೂ, ರೈತರಿಗೆ ಅಗತ್ಯ ಮುನ್ನೆಚ್ಚರಿಕೆ, ಜಾಗೃತಿ ಹಾಗೂ ವೈಜ್ಞಾನಿಕ ಕೃಷಿ ಸಲಹೆಗಳನ್ನು ನೀಡುವಲ್ಲಿ ಕೃಷಿ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ (ರಿ) ಜಿಲ್ಲಾ ಕಾರ್ಯಾಧ್ಯಕ್ಷ ಮುಜಾಹಿದ್ ಮರ್ಚೆಡ್ ಆರೋಪಿಸಿದ್ದಾರೆ.ಜಿಲ್ಲೆಯ ಸಾವಿರಾರು ರೈತರು ಸಾಲ ಮಾಡಿ ಬೀಜ, ಗೊಬ್ಬರ ಹಾಗೂ ಇತರೆ ಕೃಷಿ ಸಾಮಗ್ರಿಗಳನ್ನು ಖರೀದಿಸಿ ಬಿತ್ತನೆ ನಡೆಸಿದ್ದರು. ಆರಂಭದಲ್ಲಿ ಸುರಿದ ಅಲ್ಪ ಪ್ರಮಾಣದ ಮಳೆಯಿಂದ ಬೆಳೆಗಳು ಮೊಳಕೆಯೊಡೆದರೂ, ನಂತರ ಮಳೆಯ ಕೊರತೆಯಿಂದ ಸಸಿಗಳು ಒಣಗಿ ಹೋಗುತ್ತಿದ್ದು,ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅನೇಕ ರೈತರಿಗೆ ಮರುಬಿತ್ತನೆ ನಡೆಸುವ ಪರಿಸ್ಥಿತಿಯೂ ಇಲ್ಲದಂತಾಗಿದೆ.ಈ ಪರಿಸ್ಥಿತಿಯ ಸಾಧ್ಯತೆ ಮೊದಲೇ ಗೊತ್ತಿದ್ದರೂ, ಯಾವ ಬೆಳೆಗಳನ್ನು ಬೆಳೆಯಬೇಕು, ಯಾವ ಬೀಜಗಳನ್ನು ಬಳಸಬೇಕು, ಮಣ್ಣಿನ ಪರೀಕ್ಷೆ, ಗೊಬ್ಬರ ಹಾಗೂ ಕೀಟನಾಶಕಗಳ ಸಮರ್ಪಕ ಬಳಕೆ, ನೀರಿನ ನಿರ್ವಹಣೆ ಮತ್ತು ಹವಾಮಾನಕ್ಕೆ ಅನುಗುಣವಾದ ಕೃಷಿ ಪದ್ಧತಿಗಳ ಕುರಿತು ರೈತರಿಗೆ ಸೂಕ್ತ ಮಾರ್ಗದರ್ಶನ ನೀಡುವಲ್ಲಿ ಕೃಷಿ ಇಲಾಖೆ ವಿಫಲವಾಗಿದೆ ಎಂದು ಅವರು ದೂರಿದ್ದಾರೆ. ವಿಶೇಷವಾಗಿ ಜಂಟಿ ಕೃಷಿ ನಿರ್ದೇಶಕ ಪ್ರಕಾಶ ಚೌಹಾಣ್ ಅವರ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನವೇ ಈ ಪರಿಸ್ಥಿತಿಗೆ ಪ್ರಮುಖ ಕಾರಣವಾಗಿದೆ ಎಂದು ಆರೋಪಿಸಿರುವ ಮುಜಾಹಿದ್ ಮರ್ಚೆಡ್, ಸಂಬಂಧಿಸಿದ ಅಧಿಕಾರಿಯ ವಿರುದ್ಧ ಸರ್ಕಾರ ತಕ್ಷಣ ಶಿಸ್ತು ಕ್ರಮ ಕೈಗೊಂಡು, ಹುದ್ದೆಯಿಂದ ವಜಾಗೊಳಿಸಿ ಇಲಾಖೆಯ ವೈಫಲ್ಯದ ಕು–ರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.ಇದೇ ವೇಳೆ, ರಾಜ್ಯ ಸರ್ಕಾರವು ತಕ್ಷಣವೇ ರಾಯಚೂರು ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿ, ಬೆಳೆ ಹಾನಿಯ ಸಮಗ್ರ ಸಮೀಕ್ಷೆ ನಡೆಸಬೇಕು. ಜೊತೆಗೆ ರೈತರಿಗೆ ಸೂಕ್ತ ಪರಿಹಾರ, ಇನ್‌ಪುಟ್ ಸಬ್ಸಿಡಿ, ಬೆಳೆ ಪರಿಹಾರ ಧನ, ಕೃಷಿ ಸಾಲ ಮರುಪಾವತಿಗೆ ಅವಧಿ ವಿಸ್ತರಣೆ, ಬಡ್ಡಿ ಮನ್ನಾ ಹಾಗೂ ಅಗತ್ಯವಿದ್ದಲ್ಲಿ ಉಚಿತ ಮರುಬಿತ್ತನೆ ಬೀಜ ಮತ್ತು ಗೊಬ್ಬರವನ್ನು ವಿತರಿಸಬೇಕು ಎಂದು ಆಗ್ರಹಿಸಿದ್ದಾರೆ.ರೈತರ ಜೀವ ಮತ್ತು ಜೀವನೋಪಾಯವನ್ನು ರಕ್ಷಿಸುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು. ಸರ್ಕಾರ ಹಾಗೂ ಜಿಲ್ಲಾಡಳಿತ ತಕ್ಷಣ ಕ್ರಮ ಕೈಗೊಳ್ಳದಿದ್ದರೆ ರೈತರ ಪರವಾಗಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಮುಜಾಹಿದ್ ಮರ್ಚೆಡ್ ಎಚ್ಚರಿಕೆ ನೀಡಿದ್ದಾರೆ.



## 'ಸಂಕಲ್ಪ ಸಮಾಗಮ' ಬೃಹತ್ ಸಮಾವೇಶದ ಸ್ಥಳ ಪರಿಶೀಲನೆ

ನೈಜ್ಯ ದೆಸೆ ನ್ಯೂಸ್

ಕವಿತಾಳ –: ಪಟ್ಟಣದಲ್ಲಿ ಜುಲೈ 14ರಂದು ನಡೆಯಲಿರುವ ಇತಿಹಾಸ 'ಸಂಕಲ್ಪ ಸಮಾಗಮ' ಬೃಹತ್ ಸಮಾವೇಶದ ಯಶಸ್ಸಿಗಾಗಿ ಇಂದು ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ ಹಾಗೂ ಕೆ.ಎಸ್.ಎನ್ ಸೇವಾ ಸಮಿತಿಯ ಮುಖಂಡರು ಕವಿತಾಳ ಪಟ್ಟಣದಲ್ಲಿ ಸಮಾವೇಶದ ಸ್ಥಳ ವೀಕ್ಷಣೆಮಾಡಿದರು. ನಂತರ ಮಾತನಾಡಿದ ಶಿವನಗೌಡ ನಾಯಕ ಅವರು ಜಿಲ್ಲೆಯ ಸಮಗ್ರ ನೀರಾವರಿ, ನವಲಿ ಸಮಾನಂತರ ಜಲಾಶಯ ನಿರ್ಮಾಣ, ತಿಂಥಿ–ಣಿ ಬ್ರಿಜ್ ಬಳಿ ಜಲಾಶಯ ನಿರ್ಮಾಣ ಹಾಗೂ ನಮ್ಮ ಜಿಲ್ಲೆಗೆ 'ಏಮ್ಸ್' ಮಂಜೂರಾತಿಗಾಗಿ ಆಗ್ರಹಿಸಿ ಈ ಐತಿಹಾಸಿಕ ಬೃಹತ್ ಸಂಕಲ್ಪ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ನಾಡಿನ ಹೆಸರಾಂತ ಪೂಜ್ಯರಾದ ಅವಧೂತರಾದ ಶ್ರೀ ವಿನಯ್ ಗುರೂಜಿ ಗೌರಿಗದ್ದೆ ಅಶ್ರಮ ಚಿಕ್ಕಮಗಳೂರು ಅವರು ಜ್ಯೋತಿ ಬೆಳಗಿಸಿ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಪೂಜ್ಯ ಶ್ರೀ ಗುರುವಿನ ಮಾದಯ್ಯ ಶ್ರೀ ಅಮೋಘಸಿದ್ಧೇಶ್ವರ ಮಠ ತುರುವಿಹಾಳ ಅವರು ವಹಿಸಲಿದ್ದಾರೆ ಎಂದು ತಿಳಿಸಿದರು.ಈ ಸಮಾವೇಶಕ್ಕೆ ಜಿಲ್ಲೆಯ ಸುಮಾರು 50,000 ಸಾವಿರಕ್ಕೂ ಅಧಿಕ ರೈತರು ಮತ್ತು ಸಾರ್ವಜನಿಕರು



ಭಾಗವಹಿಸುವ ನಿರೀಕ್ಷೆ ಇರುವುದ–ರಿಂದ, ಕವಿತಾಳ ಪಟ್ಟಣದಲ್ಲಿ ವಿಶಾಲವಾದ ಸ್ಥಳವನ್ನು ಗುರುತಿಸಿ ಪರಿಶೀಲಿಸಿದರು. ಕಾರ್ಯಕ್ರಮಕ್ಕೆ ಬರುವ ಜನತೆಗೆ ಮತ್ತು ರೈತ ಬಾಂಧವರಿಗೆ ಯಾವುದೇ ರೀತಿಯ ಅಡಚಣೆಯಾಗದಂತೆ ನಿಗಾವಹಿಸಲು ಸ್ಥಳ ವೀಕ್ಷಣೆ ವೇಳೆ ಪ್ರಮುಖವಾಗಿ ಈ ಕೆಳಗಿನ ವ್ಯವಸ್ಥೆಗಳ ಕುರಿತು ಚರ್ಚಿಸಿ ಜವಾಬ್ದಾ–ರಿಯುತ ಸಮಿತಿಗಳನ್ನು ರಚಿಸಲಾಯಿತು. ವೇದಿಕೆ ಮತ್ತು ಆಸನ ವ್ಯವಸ್ಥೆ, ವಾಹನ ನಿಲುಗಡೆ ವ್ಯವಸ್ಥಿತ ಪಾರ್ಕಿಂಗ್ ಸ್ಥಳ ನಿಗದಿ, ಊಟದ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಪೂರ್ಣಕುಂಭ ಕಳಸದೊಂದಿಗೆ ಮಹಿಳೆಯರ ಸ್ವಾಗತ ಸಮಿತಿ, 5000 ಸಾವಿರ ಮಹಿಳೆಯರ ಬರಮಾಡಿಕೊಳ್ಳುವ ಸಮಿತಿ ಸೇರಿ ಇನ್ನಿತರ ಸಕಲ ವ್ಯವಸ್ಥೆಯನ್ನು ಮಾಡಿಕೊಳ್ಳಲು ಸಮಿತಿಗೆ ಸೂಚನೆ ನೀಡಿದರು.ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಕೆ. ಶಿವನಗೌಡ ನಾಯಕ್, ಕೆ–ಎಸ್ಎನ್ ಸಾಮಾಜಿಕ ಸೇವಾ ಸಮಿತಿ ಅಧ್ಯಕ್ಷರಾದ ತಿಮ್ಮಾರೆಡ್ಡಿ ಗೌಡ ಭೋಗವತಿ, ಮಾಜಿ ಎಪಿಎಂಸಿ ಅಧ್ಯಕ್ಷರಾದ ಯಮನಪ್ಪ ದಿನ್ನಿ, ಮಾಜಿ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಅಬ್ದುಲ್ ಗಫಾರ್, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ವೆಂಕಟೇಶ್ ಬೋವಿ, ಜಂಬಣ್ಣ ನೀಲಗಲ್, ಮಲ್ಲಿಕಾರ್ಜುನ ಜಕ್ಕಲದಿನ್ನಿ, ವಾಸುದೇವ್ ನಾಯಕ್, ನರಸಿಂಹರಾವ್ ಕುಲಕರ್ಣಿ, ನಾಗಲಿಂಗಯ್ಯ ಸ್ವಾಮಿ, ವೀರೇಶ್ ನಾಯಕ್ ಬೆಟ್ಟದೂರು, ಹನುಮೇಶ್ ವಕೀಲರು, ಜಿನೂರ್ ದುರ್ಗಪ್ಪ ತಡಕಲ್, ನವೀನ್ ಕುಮಾರ್ ಸಿರವಾರ್, ಪಟ್ಟಣ ಪಂಚಾಯತಿ ಸದಸ್ಯರಾದ ವಿನಯ್ ಕುಮಾರ್ ಸೇ–ರಿದಂತೆ ಪಟ್ಟಣ ಪಂಚಾಯತಿ ಹಾಲಿ ಮತ್ತು ಮಾಜಿ ಸದಸ್ಯರು ಮತ್ತು ಪಟ್ಟಣದ ಹಿರಿಯ ಮುಖಂಡರು ಉಪಸ್ಥಿತರಿದ್ದರು.



## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಗ್ರಾಫಿಕ್ ಡಿಸೈನ್ (Graphic Design)

ಗ್ರಾಫಿಕ್ ಡಿಸೈನ್ ಎಂದರೆ ಚಿತ್ರಗಳು, ಬಣ್ಣಗಳು, ಅಕ್ಷರಗಳು (Typography) ಮತ್ತು ವಿನ್ಯಾಸಗಳ ಮೂಲಕ ಮಾಹಿತಿಯನ್ನು ಆಕರ್ಷಕವಾಗಿ ಪ್ರಸ್ತುತಪಡಿಸುವ ಕಲೆ. ಇಂದು ಡಿಜಿಟಲ್ ಮಾರ್ಕೆಟಿಂಗ್, ಸೋಶಿಯಲ್ ಮೀಡಿಯಾ, ಜಾಹೀರಾತು, ಮುದ್ರಣ ಹಾಗೂ ಬ್ರಾಂಡಿಂಗ್ ಕ್ಷೇತ್ರಗಳಲ್ಲಿ ಗ್ರಾಫಿಕ್ ಡಿಸೈನರ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ.ಕೋರ್ಸ್‌ನಲ್ಲಿ ಕಲಿಯುವ ವಿಷಯಗಳು ಗ್ರಾಫಿಕ್ ಡಿಸೈನ್ ಮೂಲಭೂತ ತತ್ವಗಳು ಕಲರ್ ಥಿಯರಿ (ಬಣ್ಣಗಳ ಬಳಕೆ) ಟೈಪೋಗ್ರಫಿ (ಅಕ್ಷರ ವಿನ್ಯಾಸ) ಲೋಗೋ ಡಿಸೈನ್ ಪೋಸ್ಟರ್ ಮತ್ತು ಬ್ಯಾನರ್ ವಿನ್ಯಾಸ ಸೋಶಿಯಲ್ ಮೀಡಿಯಾ ಕ್ರಿಯೇಟಿವ್‌ಗಳು ಬ್ರೋಚರ್, ಫ್ಲೈಯರ್, ಬಿಸಿನೆಸ್ ಕಾರ್ಡ್ ವಿನ್ಯಾಸ ಬ್ರ್ಯಾಂಡಿಂಗ್ ಮತ್ತು ಕಾರ್ಪೊರೇಟ್ ಐಡೆಂಟಿಟಿ ಪ್ಯಾಕೇಜಿಂಗ್ ಡಿಸೈನ್ UI/UX ಪರಿಚಯ (ಕೆಲವು ಕೋರ್ಸ್‌ಗಳಲ್ಲಿ)ಪ್ರಿಂಟ್ ಮತ್ತು ಡಿಜಿಟಲ್ ಡಿಸೈನ್‌ಗಳು ಕಲಿಯಬೇಕಾದ ಪ್ರಮುಖ ಸಾಫ್ಟ್‌ವೇರ್‌ಗಳು Adobe Photoshop,Adobe Illustrator,Adobe,InDesign,Canva,CorelDRAW (ಕೆಲವು ಸಂಸ್ಥೆಗಳಲ್ಲಿ) Figma (UI/UX ಗಾಗಿ) ಕೋರ್ಸ್ ಅವಧಿ ಸರ್ಟಿಫಿಕೇಟ್ ಕೋರ್ಸ್: 2–6 ತಿಂಗಳು ಡಿಪ್ಲೊಮಾ: 6–12 ತಿಂಗಳು ಪದವಿ (B.Des/BVA): 3–4 ವರ್ಷ Careers360 +1 ಅರ್ಹತೆ 10ನೇ ಅಥವಾ 12ನೇ ತರಗತಿ ನಂತರ ಸೇರಬಹುದು (ಕೋರ್ಸ್‌ಗೆ ಅನುಗುಣವಾಗಿ)ಪದವಿ ಕೋರ್ಸ್‌ಗಳಿಗೆ ಸಾಮಾನ್ಯವಾಗಿ 12ನೇ ತರಗತಿ ಪಾಸ್ ಅಗತ್ಯ.ಉದ್ಯೋಗಾವಕಾಶಗಳು Graphic Designer,Logo Designer,Social Media Designer,Brand Designer,UI Designer Packaging,Designer,Motion,Graphics Designer Freelancer ಆರಂಭಿಕ ವೇತನ ಫ್ರೆಶರ್ ₹15,000–₹30,000 ಪ್ರತಿ ತಿಂಗಳು ಅನುಭವದೊಂದಿಗೆ: ₹40,000–₹1,00,000+ ಪ್ರತಿ ತಿಂಗಳು (ಕೌಶಲ್ಯ ಮತ್ತು ಸಂಸ್ಥೆಯನ್ನು ಅವಲಂಬಿಸಿ

# ಕಂಪ್ಲಿಯ ವಿವಿಧಡೆ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್




ಬಳ್ಳಾರಿ / ಕಂಪ್ಲಿ : ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ದಿನಾಚರಣೆ ಅಂಗವಾಗಿ ಕಂಪ್ಲಿಯ ವಿವಿಧಡೆ ಭಾನುವಾರ ಯಶಸ್ವಿಯಾಗಿ ಕಾರ್ಯಕ್ರಮ ಜರಿಗಿತು.ಕಂಪ್ಲಿ ಕೋಟೆಯಲ್ಲಿ : ಇಲ್ಲಿನ 1ನೇ ಹಾಗೂ 13ನೇ ವಾರ್ಡಿನಲ್ಲಿ ಬೆಳಿಗ್ಗೆ 5 ವರ್ಷದ ಒಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.1ನೇ ವಾರ್ಡಿನಲ್ಲಿ ಡಾ. ಎಪಿಜೆ ಅಬ್ದುಲ್ ಕಲಾಂ ಟ್ರಸ್ಟ್ ನ ಸಂಸ್ಥಾಪಕ ಸಂಚಾಲಕರಾದ ಬಡಿಗೇರ್ ಜಿಲಾನಸಾಬ್ ಉದ್ಘಾಟಿಸಿ ಮಾತನಾಡಿ 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೆ ಪೋಲಿಯೋ ಹನಿಯನ್ನು ಹಾಕಿಸಿ ಎಂದು ಎಂದು ತಿಳಿಸಿದರು. ಆಶಾ ಕಾರ್ಯಕರ್ತೆ ಆರ್. ವಲಿಮಾ, ಅಂಗನವಾಡಿ ಕಾರ್ಯಕರ್ತೆ ಶಿವಲೀಲಮ್ಮ ಸೇರಿದಂತೆ ಇತರ ಉಪಸ್ಥಿತರಿದ್ದರು. ಕಂಪ್ಲಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ : ಕಂಪ್ಲಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಂಪ್ಲಿ ತಾಲೂಕು ದಂಡಾಧಿಕಾರಿಗಳಾದ ಮಂಜುನಾಥ ಜೂಗಲ್ ಅವರು ಮಗುವಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಉದ್ಘಾಟಿಸಿದರು.ಈ ಸಂದರ್ಭದಲ್ಲಿ ತಾಲೂಕು ಆರೋಗ್ಯಾಧಿಕಾರಿಗಳಾದ ಡಾ. ಅರುಣ್ ಜಿ., ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಾದ ಡಾ. ರವೀಂದ್ರ ಕನಕೇರಿ, ವೈದ್ಯಾಧಿಕಾರಿಗಳಾದ ಡಾ. ಭರತ್ ಪಿ., ಬ್ಲಾಕ್ ಆರೋಗ್ಯ ಶಿಕ್ಷಣಾಧಿಕಾರಿ ಹಿರಿಯ ಆರೋಗ್ಯ ನಿರೀಕ್ಷಕರು ಆರೋಗ್ಯ ನಿರೀಕ್ಷಕರು ಶುಶ್ರೂಷಣಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಜೆಸಿಐ ಕಂಪ್ಲಿ ಸೋನಾ ವತಿಯಿಂದ : ರಾಷ್ಟ್ರೀಯ ಪಲ್ಸ್ ಪೋಲಿಯೋ ರೋಗನಿರೋಧಕ ದಿನಾಚರಣೆಯ ಅಂಗವಾಗಿ, ಎಸ್.ಎನ್. ಪೇಟೆಯ ಶ್ರೀ ವೀರಬ್ರಹ್ಮೇಂದ್ರ ಸ್ವಾಮಿ ಪಾಲಿಕ್ಲಿನಿಕ್ ಸಮೀಪ ಜೆಸಿಐ ಕಂಪ್ಲಿ ಸೋನಾ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿದ್ದ ಪಲ್ಸ್ ಪೋಲಿಯೋ ಬೂತ್ (ಲಸಿಕಾ ಕೇಂದ್ರ) ಉದ್ಘಾಟನೆಯನ್ನು ಹಿರಿಯ ಜೆಸಿ ಹಾಗೂ ಪೂರ್ವಾಧ್ಯಕ್ಷರಾದ ಜೆಸಿ ಹೇಮಯ್ಯ ಸ್ವಾಮಿ ಅವರು ಬೂತ್‌ಗೆ ಚಾಲನೆ ನೀಡಿದರು.ಕಾರ್ಯಕ್ರಮದಲ್ಲಿ ಜೆಸಿ ಡಾ. ಭರತ್ ಪದ್ಮಶಾಲಿ, ಜೆಸಿ ಡಾ. ಸುಧಾಕರ್, ಜೆಸಿ ಡಾ. ಶ್ರದ್ಧಾ ಭರತ್, ಅರುಂಧತಿ ಸುಧಾಕರ್, ಜೆಸಿ ಚಂದ್ರಶೇಖರ್ ಗೌಡ, ಜೆಸಿ ರಮೇಶ್ ಬೆಲಂಕಾರ್, ಜೆಸಿ ರಾಕೇಶ್ ಬಾಗ್ರೇಚಾ, ಎಚ್. ಜಿ. ಎಫ್. ಜಿಲನಸಾಬ್, ಜೆಸಿ ಭರತ್ ಡಿ., ಜೆಸಿ ಪೂಜಾ ಭರತ್, ಜೆಸಿ ಇಮ್ತಿಯಾಜ್, ಜೆಸಿ ವೆಂಕಟ ಸಪ್ತಗಿರಿ, ಜೆಸಿ ಗುರುಶಾಂತ ಶಾಸ್ತ್ರಿ, ಜೆಸಿ ಮನೋಜ್ ದಾನಪ್ಪ, ಜೆಸಿ ರಮೇಶ್, ಜೆಸಿ ಅಕ್ಕಿ ಜೀಲನ್, ಜೆಸಿ ಸೋಹೇಲ್, ಜೆಸಿ ಮಾನಸ, ಜೆಸಿ ಪವಿತ್ರ, ಸುಮನ್ ಪದ್ಮಶಾಲಿ, ಜಯಮ್ಮ ಹಾಗೂ ಮಂಜುನಾಥ ಉಪಸ್ಥಿತರಿದ್ದರು.ಒಟ್ಟು 193 ಮಕ್ಕಳು ಪೋಲಿಯೋ ಲಸಿಕೆ ಪಡೆದು ಪ್ರಯೋಜನ ಪಡೆದರು. ಕಣ್ವಿತಿಮ್ಮಲಾಪುರ ಗ್ರಾಮದಲ್ಲಿ : ಬಸವಶ್ರೀ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಹಾಗೂ ಸ್ವಾಮಿ ವಿವೇಕಾನಂದ ಯೂತ್ ಅಸೋಸಿಯೇಷನ್ ಅಧ್ಯಕ್ಷ ಜಗದೀಶ್ ಪೂಜಾರ್ ಉದ್ಘಾಟಿಸಿ ಮಾತನಾಡಿ 5 ವರ್ಷದ ಒಳಗಿನ ಪ್ರತಿಯೊಂದು ಮಗುವಿಗೂ 2 ಹನಿ ಪೋಲಿಯೊ ಹಾಕಿಸುವುದರ ಮೂಲಕ ಪೋಲಿಯೊ ಮುಕ್ತರನ್ನಾಗಿಸಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ಅರುಣಾಕ್ಷಿ, ಆಶಾ ಕಾರ್ಯಕರ್ತೆರಾದ ಟಿ.ಜ್ಯೋತಿ, ಜಿ.ಶಿಲ್ಪ, ಅಂಗನವಾಡಿ ಕಾರ್ಯಕರ್ತೆ ಹೊಳೆಯಮ್ಮ, ಪ್ರಮುಖರಾದ ಶಿವಪ್ಪ, ಟಿ. ಕುಬೇರ, ಎನ್ ರಾಘವೇಂದ್ರ, ವಿರೇಶ ಸೇರಿದಂತೆ ಇತರರಿದ್ದರು. ವಾಸವಿ ಯುವಜನ ಸಂಘ ಹಾಗೂ ಪಟ್ಟಣದ 30 ಬೂತ್ ಗಳು ಸೇರಿದಂತೆ ತಾಲೂಕಿನದ್ದಂತ ಯಶಸ್ವಿಯಾಗಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಜರಗಿತ್ತು.



## ಕೊಡೆಕಲ್ ಬಸ್ ನಿಲ್ದಾಣದಲ್ಲಿ ಪಲ್ಸ್ ಪೋಲಿಯೋ ಅಭಿಯಾನ ಯಶಸ್ವಿ

ನೈಜ್ಯ ದೆಸೆ ನ್ಯೂಸ್





ಕೊಡೆಕಲ್, ಜೂನ್ 28: ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನದ ಅಂಗವಾಗಿ ಕೊಡೆಕಲ್ ಬಸ್ ನಿಲ್ದಾಣದಲ್ಲಿ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡುವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕೊಡೆಕಲ್‌ನ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಶ್ರೀ ಮುಜಾಹಿದ್ ನಮಾಜಕಟ್ಟಿ ಹಾಗೂ ಶ್ರೀ ರಾಮಚಂದ್ರ ಮುಚ್ಚಟ್ಟಿ ಅವರು ಮಕ್ಕಳಿಗೆ ಪೋಲಿಯೋ ಲಸಿಕೆ ನೀಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿಗಳಾದ ಡಾ. ಸಂಜಯ ಚಂದಾ, ಡಾ. ಸೀಮಾ ಕೋರಿ ಹಾಗೂ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀ ಚನ್ನಬಸಪ್ಪ ಸ.ಆ.ಅ ಶ್ರೀ ಸತೀಶ ಉಪಸ್ಥಿತರಿದ್ದು, ಪೋಷಕರು ತಮ್ಮ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಬೇಕು ಎಂದು ಮನವಿ ಮಾಡಿದರು.ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸಿ ಅಭಿಯಾನವನ್ನು ಯಶಸ್ವಿಗೊಳಿಸಿದರು.

# "ಮಾಧ್ಯಮದ ಪರಿಕಲ್ಪನೆ ಮತ್ತು ಅಶೋಕ ಹಾಗೂ ಇಂದಿನ ಮಾಧ್ಯಮ"

ನೈಜ್ಯ ದೆಸೆ ನ್ಯೂಸ್



ಜಂಬೂ ದ್ವೀಪದಲ್ಲೇ ಮೊದಲ ಬಾರಿಗೆ ಮಾಧ್ಯಮ ಎಂಬ ಪರಿಕಲ್ಪನೆ ಆರಂಭಿಸಿದ ಕೀರ್ತಿ ಮೌರ್ಯ ಸಾಮ್ರಾಟ ಅಶೋಕ ಚಕ್ರವರ್ತಿಗೆ ಸಲ್ಲುತ್ತದೆ,ಹಾಗೂ ಪ್ರಾಚೀನ ಕಾಲದಲ್ಲಿ ಮೊದಲ ಬಾರಿಗೆ ವಿಶಾಲ ಸಾಮ್ರಾಜ್ಯದಲ್ಲಿ ಆಳ್ವಿಕೆ ಮಾಡಿದ ಕೀರ್ತಿಯೂ ರಾಜ ಅಶೋಕನಿಗೆ ಸಲ್ಲುತ್ತದೆ, ಅವತ್ತಿನ ವಿಶಾಲ ಸಾಮ್ರಾಜ್ಯದಲ್ಲಿ ಉತ್ತಮ ಸಂದೇಶ & ಕಾಯಿದೆಗಳನ್ನು ಪ್ರಜೆಗಳಿಗೆ ಮನವರಿಕೆ ಮಾಡಲು ಬಂಡೆಗಲ್ಲು,ಸ್ಥಂಭಗಳ ಮೇಲೆ ಕಾಯಿದೆಗಳನ್ನು ಬರೆಸುವ ಪ್ರಕ್ರಿಯೆ ಆರಂಭಿಸಿದನು, ಅದನ್ನು ಶಾಸನ ಎಂದು ಕರೆಯಲಾಗಿದೆ, ಅಶೋಕ ಕ್ರಿ.ಪೂ.(273–232)ರ ಕಾಲಘಟ್ಟದಲ್ಲಿ ಪ್ರಜಾಹಿತ ಕಾರ್ಯಕ್ಕೆ ಮುಡಿಪಾಗಿದ್ದ ಮಾದರಿ ಅರಸ ನಾಗಿದ್ದನು. ಅಶೋಕ ಎಂದರೆ ಶೋಕವಿಲ್ಲದವನು ಎಂದರ್ಥ.ದಯೆ,ದಾನ,ಧರ್ಮ,ಸೋದರ ’ತೆ,ತಾಳ್ಮೆ,ಅನುಕಂಪ,ಪ್ರೀತಿ,ಸರಳತೆ,ಸಹಿಷ ್ಣತೆಯಂತಹ ಉದಾತ್ತತೆಯ ಹೊಂದಿದ್ದ ಮಾನವೀಯ ಮೌಲ್ಯದ ಪ್ರತಿಪಾದಕ ಹಾಗೂ ಗರಿಷ್ಠ ಪ್ರಜಾಹಿತ ಚಿಂತಕನಾಗಿ ಹಾಗೂ ಅಹಿಂಸೆಯ ಪರಿಪಾಲಕನಾಗಿ, ಪ್ರಾಣಿ ಬಲಿ ಮತ್ತು ಬೇಟೆಯನ್ನು ನಿಷೇಧ ಮಾಡಿದನು, ಅಶೋಕನು ಹೊರಡಿಸಿದ 6ನೇ ಬಂಡೆಗಲ್ಲು ಶಾಸನದಲ್ಲಿ "ನಾನು ಎಲ್ಲೇ ಇರಲಿ ಯಾವುದೇ ಸಮಯದಲ್ಲಾದರೂ ಪ್ರಜೆಗಳು ತಮ್ಮ ಕುಂದುಕೆಣಟಿಜಜಜಿುಟಿಜಜರೆತೆಗಳನ್ನು ತನ್ನ ಬಳಿ ತಿಳಿಸಬಹುದು ಅದನ್ನು ಪರಿಹರಿಸಲು ಸದಾ ಸಿದ್ದ" ಎಂದು ಬರೆಸಿದ್ದನು,ರಸ್ತೆಗಳು ಅದರ ಇಕ್ಕೆಲಗಳಲ್ಲಿ ಸಾಲು ಮರಗಳು, ಕುಡಿಯುವ ನೀರು, ಪಶು ಆಸ್ಪತ್ರೆಗಳು, ತಂಗುದಾಣ,ವಿದೇಶಿ ವ್ಯಾಪಾರ,ಕೃಷಿಕರು ಹಾಗೂ ದೀನ– ದುರ್ಬಲಿಗೆ ನೆರವು ಮತ್ತಿತರ ಜನೋಪಕಾರಿ ಕಾರ್ಯ ಕ್ರಮಗಳಿಗಾಗಿ ಅವಿರತವಾಗಿ ಶ್ರಮಿಸಿದನು. ಪ್ರಾಚೀನ ಕಾಲದಲ್ಲಿಯೇ ಗಿಳಿ,ಮೈನಾ,ಹಂಸ,ಚಕ್ರವಾಕ ಪಕ್ಷಿ,ಆಮೆ, ಮುಳ್ಳುಹಂದಿ,ಅಳಿಲು,ಜಿಂಕೆ,ಗೂಳಿ,ಗರ್ಭಿಣಿ ಅಥವಾ ಹಾಲುಣಿಸುವ ಆಡು,ಕುರಿ ಹಾಗೂ ಹಂದಿ(ಮತ್ತು ಅವುಗಳ 6 ತಿಂಗಳೊಳಗಿನ ಮರಿಗಳು) ಕೊಲ್ಲಬಾರದೆಂದು ಆಜ್ಞೆ ಮಾಡಿದ್ದನು.ಯುದ್ದಗಳಿಂದ ದೂರ ಉಳಿದು ಶಾಂತಿ,ಸಹನೆಯಿಂದ ದೇಶ ಕಟ್ಟಿದ ಏಕೈಕ ಚಕ್ರವರ್ತಿ ಅಶೋಕ,ಅವನು ಮಾದರಿ ರಾಜ್ಯ ರೂಪಿಸಿ,ಯುದ್ಧ ಮನುಕುಲಕ್ಕೆ ಮಾರಕ ಎಂಬ ಸಂದೇಶವನ್ನು ಜಗತ್ತಿಗೆ ಸಾರಿದ ಮೆಣಟಿಜಜಜಿುಟಿಜಜಟ್ಟ ಮೆಣಟಿಜಜಜಿುಟಿಜಜದಲಿಗ,ಇವೆಲ್ಲವು ಅವನು ಹೊರಡಿಸಿದ ಮಾಧ್ಯಮದಿಂದ ಇಂದಿಗೂ ಜೀವಂತವಿದೆ, ಅಶೋಕನ ಅಂದಿನ ಮಾಧ್ಯಮಕ್ಕೂ ಇವತ್ತಿನ ದ್ರಶ್ಯ ಮತ್ತು ಮುದ್ರಣ ಮಾಧ್ಯಮಕ್ಕೂ ಅಜಗಜಾಂತರ ವ್ಯತ್ಯಾಸವಿದೆ, ಇವತ್ತಿನ ಕೆಲ ದೃಶ್ಯ ಮಾಧ್ಯಮಗಳು ತಮಗೆ ಅನುಕೂಲಕರವಾಗಿ ಭಿತ್ತರಿಸುತ್ತಿವೆ, ಇವುಗಳನ್ನು ವೀಕ್ಷಿಸಿ ಗಲ್ಫ್ ರಾಷ್ಟ್ರಗಳಲ್ಲಿ ನೆಲೆಸಿರುವ ಪರಿಚಿತ ಅನಿವಾಸಿ ಭಾರತೀಯರನ್ನು ವಿದೇಶಗಳಲ್ಲಿ ಯುದ್ಧ ಹೇಗಿದೆ ಎಂದು ಕೇಳಿದರೆ ಇಲ್ಲಿನ ಕೆಲ ಮಾಧ್ಯಮಗಳಲ್ಲಿ ಭಿತ್ತಿರಿಸುವ ರೀತಿಯಲ್ಲಿ ದೊಡ್ಡ ಮಟ್ಟದ ಭೀಕರತೆ ಏನು ಇಲ್ಲ ಎನ್ನುತ್ತಾರೆ,ನಾಲ್ಕನೇ ಅಂಗವಾಗಿರುವ ಮಾಧ್ಯಮಗಳು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯಗಳಿಗೆ ಸ್ಪಂದಿಸುವ ಅಗತ್ಯವಿದೆ, ಬಡವರು,ಕಾರ್ಮಿಕರು,ನಿರ್ಗತಿಕರು,ಅಲೆಮಾರಿಗಳು,ಹಕ್ಕಿಪಿಕ್ಕಿಗಳು, ಬುಡಕಟ್ಟು ಆದಿವಾಸಿಗಳು,ಬೀದಿ ಬದಿಯ ವ್ಯಾಪಾರಿಗಳು,ಮಹಿಳೆಯರು,ರೈತರು,ವಿಧ ್ಯಾರ್ಥಿಗಳ ಸಮಸ್ಯೆಗಳು ಬೆಟ್ಟದಷ್ಟಿದೆ,ಅಲ್ಲದೆ ಬಡತನ,ನಿರುದ್ಯೋಗ, ರೋಗರುಜಿನಗಳಿಗೆ ಸಿಲುಕಿ ಸಾಮಾನ್ಯ ಜನರು ನರುಳುತ್ತಿದ್ಧಾರೆ,ದಿನ ಬಳಕೆ ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಬೆಲೆ ಗಗನಕ್ಕೇರುತ್ತಿದೆ,ಹೀಗೆ ಸಾಕಷ್ಟು ಸಮಸ್ಯೆಗಳು ದೇಶವನ್ನು ಬಾಧಿಸುತ್ತಿವೆ, ಅವುಗಳ ಬಗ್ಗೆ ಹೆಚ್ಚಿನ ಗಮನ ಹರಿಸಿ ಸಂಬಂಧಪಟ್ಟ ಇಲಾಖೆಗಳು ಸ್ಪಂದಿಸುವ ರೀತಿಯಲ್ಲಿ ಮಾಧ್ಯಮಗಳು ಗಮನ ಸೆಳೆಯಬೇಕು.ಯಾವುದು ಒಂದು ರಾಜಕೀಯ ಪಕ್ಷದ ಮಧ್ಯವರ್ತಿಗಳಾಗಿ ಮಾಧ್ಯಮಗಳು ಕಾರ್ಯ ನಿರ್ವಹಿಸಬಾರದು. ಉತ್ತಮ ರಾಷ್ಟವನ್ನು ರೂಪಿಸುವಲ್ಲಿ ಮಾಧ್ಯಮಗಳ ಪಾತ್ರವೂ ಸಾಕಷ್ಟಿದೆ.ಶೇ 80% ಜನತೆ ದೃಶ್ಯ ಮಾಧ್ಯಮದಲ್ಲಿ ಭಿತ್ತರವಾಗುವ ಸುದ್ದಿಗಳನ್ನೇ ಸತ್ಯವೆಂದು ಭಾವಿಸುತ್ತಾರೆ.ಆಗಾಗಿ ಕೋಮು ಸಾಮರಸ್ಯ,ಭ್ರಾತೃತ್ವ,ಸಹನೆ,ಸಹಬಾಳ್ವೆ,ಸಮಾಜಕ್ಕೆ ಪೂರಕವಾಗಿರಬೇಕು ನಮ್ಮ ಮಾಧ್ಯಮಗಳು.

## ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ

ನೈಜ್ಯ ದೆಸೆ ನ್ಯೂಸ್



ಕವಿತಾಳ : ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಇಂದು ಸರ್ಕಾರ ಹಮ್ಮಿಕೊಂಡಿರುವ ನಾಲ್ಕು ದಿನಗಳ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕುರಿಲಿಂಗಪ್ಪ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.ಜಗತ್ತನ್ನೇ ತಲ್ಲಣಿಸಿದ್ದ ಪೋಲಿಯೋ ರೋಗವನ್ನು ಲಸಿಕೆ ಹಾಕುವ ಮೂಲಕ ನಮ್ಮ ದೇಶದಲ್ಲಿ ನಿರ್ಮೂಲನೆ ಮಾಡಲಾಗಿದ್ದು , ಆದರೆ ಬೇರೆ ದೇಶದಿಂದ ಒಲಸೆ ಬರುವಂತಹ ಜನರಲ್ಲಿ ಇದು ಕಾಣುವ ಸಾಧ್ಯತೆ ಇದ್ದು ಅದಕ್ಕಾಗಿ ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ತಪ್ಪದೆ ಪೋಲಿಯೋ ಹನಿ ಹಾಕಿಸುವ ಮೂಲಕ ತಮ್ಮ ಮಕ್ಕಳಿಗೆ ಉತ್ತಮ ಆರೋಗ್ಯವನ್ನು ಕಲ್ಪಿಸಿ ಅವರ ಭವಿಷ್ಯ ಉಜ್ವಲಗೊಳಿಸ ಬೇಕು ಎಂದರು.ಈ ಸಂದರ್ಭದಲ್ಲಿ ವೈದ್ಯಾಧಿಕಾರಿ ಡಾ. ಪ್ರವೀಣ್. ಆರ್ ಬಿ ಎಸ್ ಕೆ ವೈದ್ಯಾಧಿಕಾರಿ ಡಾ.ಶ್ರೀಧರ್ ಇಲ್ಲೂರ್ . ಪಟ್ಟಣ ಪಂಚಾಯತ್ ಸದಸ್ಯರಾದ ಲಿಂಗರಾಜ್ ಕಂದಗಲ್. ಯಲ್ಲಪ್ಪ ಮಾಡಗಿರಿ.ರುಕ್ಮುದೀನ್ ಮದರಕಲ್, ಮುಖಂಡರಾದ ತಿಪ್ಪಯ್ಯಸ್ವಾಮಿ, ಓವಣ್ಣ ಕಡತಲ್. ಆರೋಗ್ಯ ನಿರೀಕ್ಷಣಾಧಿಕಾರಿ ಪ್ರದೀಪ್, ಸಿಬ್ಬಂದಿಗಳಾದ ಜಯಶ್ರೀ.ಇನ್ನಿತರರು ಉಪಸ್ತಿತರಿದ್ದರು. ಮೊದಲನೇ ದಿನ ಮನೆ ಮನೆ ಪೋಲಿಯೋ ಕಾರ್ಯಕ್ರಮ ಒಟ್ಟು ಹದಿನೈದು ಬೂತ್ ಗಳನ್ನು ಮಾಡಲಾಗಿದೆ.ನಂತರ ಬೂತ್ ಮಟ್ಟದಲ್ಲಿ ಪೋಲಿಯೋ ಹನಿ ಹಾಕಲಾಗುವುದಾಗಿ ತಿಳಿಸಿದ್ದಾರೆ.

# ಪಲ್ಸ್ ಪೋಲಿಯೋ ಅಭಿಯಾನದಲ್ಲಿ ನಗರ ಆರೋಗ್ಯ ಕೇಂದ್ರ ಸಿಂಧನೂರು ವ್ಯಾಪ್ತಿಗೆ ಶೇ.97ರಷ್ಟು ಸಾಧನೆ



ನೈಜ್ಯ ದೆಸೆ ನ್ಯೂಸ್

ಸಿಂಧನೂರು, ಜೂ. 28: ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನದ ಅಂಗವಾಗಿ ನಗರ ಆರೋಗ್ಯ ಕೇಂದ್ರ, ಸಿಂಧನೂರು ವತಿಯಿಂದ ಭಾನುವಾರ ಹಮ್ಮಿಕೊಳ್ಳಲಾದ ಪಲ್ಸ್ ಪೋಲಿಯೋ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಈ ಅಭಿಯಾನದಲ್ಲಿ ಒಟ್ಟು 8,354 ಮಕ್ಕಳಿಗೆ ಪೋಲಿಯೋ ಲಸಿಕೆ ನೀಡುವ ಗುರಿ ಹೊಂದಲಾಗಿದ್ದು, 8,105 ಮಕ್ಕಳಿಗೆ ಲಸಿಕೆ ನೀಡುವ ಮೂಲಕ ಶೇ.97ರಷ್ಟು ಗುರಿ ಸಾಧನೆ ಮಾಡಲಾಗಿದೆ.ನಗರ ಆರೋಗ್ಯ ಕೇಂದ್ರದಲ್ಲಿ ನಡೆದ ಕಾರ್ಯಕ್ರಮವನ್ನು ವೈದ್ಯಾಧಿಕಾರಿ ಡಾ. ಮೇರಿ ಭಂಡಾರಿ ಉದ್ಘಾಟಿಸಿ ಮಾತನಾಡಿ, ಪೋಲಿಯೋ ನಿರ್ಮೂಲನೆಗಾಗಿ ಆರೋಗ್ಯ ಇಲಾಖೆ ನಿರಂತರವಾಗಿ ಶ್ರಮಿಸುತ್ತಿದ್ದು, ಪ್ರತಿಯೊಬ್ಬ ಪೋಷಕರು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು ಎಂದು ಕರೆ ನೀಡಿದರು. ಭಾರತವು ಈಗಾಗಲೇ ಪೋಲಿಯೋ ಮುಕ್ತ ರಾಷ್ಟ್ರವಾಗಿ ಗುರುತಿಸಿಕೊಂಡಿದ್ದು, ಈ ಸ್ಥಾನಮಾನವನ್ನು ಮುಂದುವರಿಸಿಕೊಂಡು ಹೋಗಲು ಜನನದಿಂದ ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಪ್ರತಿಯೊಂದು ಸುತ್ತಿನಲ್ಲೂ ತಪ್ಪದೇ ಪೋಲಿಯೋ ಹನಿ ಹಾಕಿಸುವುದು ಅತ್ಯಗತ್ಯವಾಗಿದೆ. ಆರೋಗ್ಯ ಇಲಾಖೆ ಆಯೋಜಿಸುವ ಲಸಿಕಾ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡಿದಾಗ ಮಾತ್ರ ಪೋಲಿಯೋ ಮುಕ್ತ ಭಾರತವನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಸಾಧ್ಯ ಎಂದು ಅವರು ಹೇಳಿದರು.ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಹನುಮಂತಪ್ಪ (HIO) ಅವರು ಮತ್ತು ನಗರ ಆರೋಗ್ಯ ಕೇಂದ್ರ ಸಿಬ್ಬಂದಿಗಳ ನೇತೃತ್ವದಲ್ಲಿ ಸಂಪೂರ್ಣ ಕಾರ್ಯಕ್ರಮವನ್ನು ಸುಸೂತ್ರವಾಗಿ ಆಯೋಜಿಸಲಾಯಿತು. ನಗರದ ವಿವಿಧ ಪೋಲಿಯೋ ಬೂತ್‌ಗಳು, ಅಂಗನವಾಡಿ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸರ್ಕಾರಿ ಆಸ್ಪತ್ರೆಗಳು,ಕೆಲ ಮಕ್ಕಳ ಖಾಸಗಿ ಆಸ್ಪತ್ರೆಗಳು ,ಬಸ್ ನಿಲ್ದಾಣ, ರೈಲು ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ವಿಶೇಷ ಲಸಿಕಾ ಕೇಂದ್ರಗಳನ್ನು ತೆರೆಯಲಾಗಿತ್ತು. ಆರೋಗ್ಯ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿ ಐದು ವರ್ಷದೊಳಗಿನ ಮಕ್ಕಳನ್ನು ಗುರುತಿಸಿ ಲಸಿಕೆ ಪಡೆಯದ ಮಕ್ಕಳಿಗೆ ಬೂತ್ ಗಳಿಗೆ ಕರೆದೊಯ್ದು ಪೋಲಿಯೋ ಹನಿ ಹಾಕುವ ಕಾರ್ಯವನ್ನು ಪರಿಣಾಮಕಾರಿಯಾಗಿ ನಡೆಸಿದರು.ಕಾರ್ಯಕ್ರಮದಲ್ಲಿ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಪ್ರಾಚಾರ್ಯ ಲಾಜರ್ ಸಿರಿಲ್ ಜಿ., ಕಾರ್ಯದರ್ಶಿ ಇರ್ಶಾದ್ ಅತ್ತಾರ, ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಹಾಗೂ ಸನ್ ರೈಸ್ ಪ್ಯಾರಾಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಆರೋಗ್ಯ ಇಲಾಖೆಯ ಸಿಬ್ಬಂದಿಯೊಂದಿಗೆ ಜನಜಾಗೃತಿ ಮೂಡಿಸುವುದು, ಪೋಷಕರಿಗೆ ಮಾಹಿತಿ ನೀಡುವುದು, ಮಕ್ಕಳನ್ನು ಪೋಲಿಯೋ ಬೂತ್‌ಗಳಿಗೆ ಕರೆತರಲು ಸಹಕರಿಸುವುದು ಹಾಗೂ ಲಸಿಕಾ ಕೇಂದ್ರಗಳಲ್ಲಿ ವ್ಯವಸ್ಥಾಪನಾ ಕಾರ್ಯಗಳಲ್ಲಿ ಸೇವೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಸ್ವಯಂಸೇವಕರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಎಲ್ಲರ ಸಮನ್ವಯ ಮತ್ತು ಶ್ರಮದ ಫಲವಾಗಿ ನಗರ ಆರೋಗ್ಯ ಕೇಂದ್ರವು ಶೇ.97ರಷ್ಟು ಗುರಿ ಸಾಧಿಸುವ ಮೂಲಕ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ಸಾರ್ವಜನಿಕರ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿ, ಮುಂದಿನ ದಿನಗಳಲ್ಲಿಯೂ ಯಾವುದೇ ಮಗು ಪೋಲಿಯೋ ಲಸಿಕೆಯಿಂದ ವಂಚಿತವಾಗದಂತೆ ಪ್ರತಿಯೊಬ್ಬರೂ ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.